ನಮಗೆ ಕೊಟ್ಟಿರುವ 34 ಸಾವಿರ ಮಿಲಿಯನ್ ಅನ್ನು ಒಂದು ಬ್ಯಾರನ್‌ಗೆ 1200 ಕೆ.ಜಿ.ಎಂದು ಹಂಚುತ್ತಾರೆ. ಆ ರೀತಿಯಾಗಿ ಅವರು ನೋಂದಣಿ ಮಾಡಿಕೊಂಡ ಮೇಲೆ ಯಾವುದೇ ರೀತಿಯಿಂದ ಸರ್ಕಾರ ಅವರ ಮೇಲೆ ನಿಯಂತ್ರಣ ತರುವುದಕ್ಕಾಗುವುದಿಲ್ಲ. ಆದ್ದರಿಂದ, ತಾವು ದಯಮಾಡಿ ಇವತ್ತಿನಿಂದ ಇದಕ್ಕೆ ಚಾಲನೆ ಕೊಟ್ಟು ಸುಪ್ರೀಂ ಕೋರ್ಟಿಗೆ ಹೋಗಬೇಕು, ಏಕೆಂದರೆ, ಇದೊಂದ ಕೃಷಿ ಉತ್ಪನವಾಗಿರುವುದರಿಂದ ಸರ್ಕಾರ ವ್ಯಾಪ್ತಿಯಲ್ಲಿ ಬರುವುದರಿಂದ ಬೋರ್ಡಿನ ನಿರ್ಣಯವನ್ನು ಉಲ್ಲಂಘನೆ ಮಾಡುವ ಹಕ್ಕು ಸರ್ಕಾರಕ್ಕಿದೆ, ಹೀಗಾಗಿ ಸರ್ಕಾರ ದವರು ಇದರ ಕಡೆಗೆ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ನಾನೀಗಾಗಲೇ ಹೇಳಿದಂತೆ ಈ ರಾಜ್ಯದಲ್ಲಿ ಮಾತ್ರ ವಿ ಎಫ್‌ಸಿ ತಂಬಾಕನ್ನು ಬೆಳೆಯುತ್ತಾರೆ. ಇದನ್ನು ಕುಂಠಿತಗೊಳಿಸುವ ಉದ್ದೇಶ ನಮಗಾಗಲೀ ಅಥವಾ ತಂಬಾಕು ಮಂಡಲಿಗೆ ಆಗಲೀ ಇಲ್ಲ. ಇದನ್ನು ಹೆಚ್ಚು ಬೆಳೆಸಿ ಏನು ಅವಶ್ಯಕತೆ ಇದೆ ಆ ಪ್ರಮಾಣದಲ್ಲಿ ಇದನ್ನು ಸರಿಸಮಾನವಾಗಿ ಇಟ್ಟುಕೊಂಡು ಹೋಗಬೇಕು ಎನ್ನುವ ಉದ್ದೇಶದಿಂದ ರಾಜ್ಯದಲ್ಲಿ ಇದನ್ನು ಬೆಳೆದು ರಫ್ತು ಮಾಡಬೇಕು ಎನ್ನುವ ದೃಷ್ಟಿಯಿಂದ, ಅಧ್ಯಕ್ಷರು ನಮ್ಮ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದಾಗ ಈ ಬೆಳೆಯನ್ನು ರಕ್ಷಣೆ ಮಾಡುವುದಕ್ಕಾಗಿ, ನಮ್ಮ ಡಿವಿಜನ್ ಬೆಂಚಿನ ತೀರ್ಪನ್ನು ಇಂಪ್ಲಿಮೆಂಟ್ ಮಾಡಿದರೆ ತೊಂದರೆಯಾಗಬಹುದು ಎನ್ನುವ ಕಾರಣಕ್ಕಾಗಿ ನಾವು ಕೂಡ ಕೋರ್ಟಿಗೆ ಹೋಗುವುದಕ್ಕೆ ತಯಾರಿದ್ದೇವೆ. ನೀವು ಇಂಪ್ಲೀಡ್ ಆಗಿ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಅವರು ಹೋಗಲಿಲ್ಲವೆಂದರೆ ಇನ್ನು ಕೆಲವೇ ದಿವಸದಲ್ಲಿ ನಾವು ಹೋಗುವುದಕ್ಕೆ ತಯಾರಿದ್ದೇವೆ. ಕಾನೂನು ಇಲಾಖೆಯ ಸಲಹೆ ಬಂದ ತಕ್ಷಣ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು:- ಈಗ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಅಲ್ಪಕಾಲಾವಧಿ ಚರ್ಚೆ; ನಿನ್ನೆಯ ಚರ್ಚೆಯನ್ನು ಈಗ ಮುಂದುವರಿಸೋಣ. ಮಾನ್ಯ ಡಿ.ವಿ. ಸದಾನಂದಗೌಡರವರು ಪ್ರಾರಂಭಿಸಿ.

6.ನಿಯಮ 69 ರ ಮೇರೆಗೆ

ವಿಷಯ :- ರಾಜ್ಯದಲ್ಲಿ ವಾಣಿಜ್ಯ ಬೆಳೆಗಳೂ ಸೇರಿದಂತೆ ಎಲ್ಲಾ ವ್ಯವಸಾಯೋತ್ಪನ್ನ ಬೆಳೆಗಳ ಬೆಲೆ ಕುಸಿದಿದ್ದು, ರೈತರು ಆತ್ಮಹತ್ಯೆಯ ಹಾದಿ ಹಿಡಿದಿರುವ ಬಗ್ಗೆ

+ಶ್ರೀ ಡಿ. ವಿ. ಸದಾನಂದ ಗೌಡ (ಪುತ್ತೂರು):- ಮಾನ್ಯ ಉಪಾಧ್ಯಕ್ಷರೆ, ನಾನು ಸದನದ ವೇಳೆಯನ್ನು ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ; ಬೇರೆ ಬೇರೆ ಭಾಗಗಳಿಂದ ಬೇರೆ ಬೇರೆ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಮೂರ್ನಾಲ್ಕು ಜಿಲ್ಲೆಗಳಲ್ಲಿ ಬೆಳೆಯುವ ಅಡಿಕೆ ಬೆಳೆಯ ಬಗ್ಗೆ ಇಲ್ಲಿ ಪ್ರಸ್ತಾಪಿಸುವುದಕ್ಕೆ ನಾನು ಎದ್ದು ನಿಂತಿದ್ದೇನೆ. ಈ ಬಗ್ಗೆ ಒಂದೆರಡು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ. ರೈತರ ಬಗ್ಗೆ ನಾಟಕ ಮಾಡುವಂಥಾದ್ದನ್ನು ಮತ್ತು ಮೊಸಳೆ ಕಣ್ಣೀರು ಹಾಕುವಂಥಾದ್ದನ್ನು ಸರ್ಕಾರ ಪ್ರಾರಂಭಿಕ ಹಂತದಲ್ಲಿಯೇ ನಿಲ್ಲಿಸಬೇಕು. ಇದನ್ನು ಮಾಡದೇ ಹೋದರೆ ಖಂಡಿತವಾಗಿಯೂ ಕೂಡ ಕರ್ನಾಟಕ

ರಾಜ್ಯದ ರೈತರ ಹಿತರಕ್ಷಣೆ ಆಗುವುದಿಲ್ಲವೆಂದು ನಾನು ಪ್ರಾರಂಭದಲ್ಲಿಯೇ ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಇನ್ನು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಆಗಬೇಕಾಗಿದೆ. ಆದರೆ ರಾಜ್ಯಪಾಲರ ಭಾಷಣ ನೋಡಿದರೆ ನನಗೆ ಏನು ಅನ್ನಿಸುತ್ತದೆ ಎಂದರೆ, ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವುದಕ್ಕೆ ಒಂದು ಭಿನ್ನವತ್ತಳೆ ತಯಾರು ಮಾಡಿದಂತೆ ಕಾಣುತ್ತದೆ. ಇದು ನಿಜವಾಗಿಯೂ ರಾಜ್ಯಪಾಲರ ಭಾಷಣದಂತೆ ಕಾಣುತ್ತಿಲ್ಲ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ನೇರವಾಗಿ ಎಲ್ಲಾ ಜವಾಬ್ದಾರಿಗಳನ್ನು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸತಕ್ಕಂಥ ಒಂದು ಪ್ರಯತ್ನವನ್ನು ತಮ್ಮ ಕಡೆಯಿಂದ ರಾಜ್ಯಪಾಲರ ಮುಖಾಂತರ ವಿಧಾನ ಸಭೆಯಲ್ಲಿ ಮಾಡಿಸಲಾಗಿದೆ. ಈ ರೀತಿ ಆಗಬಾರದಿತ್ತು. ನಿಮ್ಮ ಸಾಧಕಭಾಧಕಗಳು ಮತ್ತು ಬಾಕಿ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿ ರೈತನಿಗೆ ಸ್ವಲ್ಪಮಟ್ಟಿಗಾದರೂ ಸಮಾಧಾನ ಮಾಡತಕ್ಕಂಥ ಪ್ರಯತ್ನ ತಮ್ಮ ಕಡೆಯಿಂದ ಆಗ ಬೇಕಾಗಿತ್ತು. ಆದರೆ ಅದನ್ನು ನೀವು ಮಾಡಿಲ್ಲ. ಇದರ ಬದಲಾಗಿ ನೇರವಾಗಿ ಕೇಂದ್ರದ ಮೇಲೆ ದಾಳಿ ಮಾಡಿದ್ದೀರಿ. ಸನ್ಮಾನ್ಯ ಶ್ರೀ ವೈ.ಕೆ. ರಾಮಯ್ಯನವರು ಈಗ ಸದನದಲ್ಲಿ ಇಲ್ಲ. ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ರೈತರ ಬಗ್ಗೆ ಕಾಳಜಿ ಇಲ್ಲ ಮತ್ತು ಆಮದು ಸುಂಕವನ್ನು ಈಗ ಹಾಕಿರುವುದು ಸಾಕಾಗುವುದಿಲ್ಲ, ಇದನ್ನು ಜಾಸ್ತಿ ಮಾಡಬೇಕೆಂದು ಮಾನ್ಯ ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿದ್ದರು. ಈ ವಿಷಯದ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಈ ವಿಷಯವನ್ನು ಪ್ರತ್ಯೇಕವಾಗಿ ಚರ್ಚೆ ಮಾಡತಕ್ಕಂಥ ವ್ಯವಸ್ಥೆ ಮಾಡೋಣ. ನನ್ನ ಮತ್ತು ಮೊನ್ನೆ ದಿವಸ ಈ ಸದನದಲ್ಲಿ ನಡೆದಂಥ ಘಟನೆ ನೇರವಾಗಿ ರಾಜ್ಯಸರ್ಕಾರ ಯಾವರೀತಿಯಾಗಿ ರೈತರ ಸಮಸ್ಯೆಗೆ ಸ್ಪಂದನೆ ಮಾಡಿದೆ ಎನ್ನತತಕ್ಕಂಥಾದ್ದು ಆಡಳಿತ ಪಕ್ಷದ ವತಿಯಿಂದ ಇಡೀ ರಾಜ್ಯಕ್ಕೆ ತೋರಿಸತಕ್ಕಂಥ ಕೆಲಸವಾಗಿದೆ. ಆವರ್ತನದಿಗಾಗಿ ಸಾಕಷ್ಟು ಹಣ ಬಿಡುಗಡೆ ಮಾಡಿಲ್ಲ ಮತ್ತು ಹೆಚ್ಚು ಖರೀದಿ ಕೇಂದ್ರಗಳನ್ನು ಸಹ ಮಾಡಿಲ್ಲ. ಹಾಗೆಯೇ ಖರೀದಿ ಕೇಂದ್ರಗಳನ್ನು ಸಾಕಷ್ಟು ಮಾಡುವುದಕ್ಕೆ ಏನು ಮಾಡಬೇಕು ಎಂಬುದರ ಬಗ್ಗೆ ಆಡಳಿತ ಪಕ್ಷದ ಸದಸ್ಯರು ಸನ್ಮಾನ್ಯ ಮುಖ್ಯಮಂತ್ರಿ ಮತ್ತು ಕೃಷಿ ಮಂತ್ರಿಗಳನ್ನು ಭೇಟಿ ಮಾಡಿ ಪರಿಹಾರ ಕಂಡು ಹಿಡಿಯಬಹುದಾಗಿತ್ತು. ಆದರೆ ಈ ರೀತಿ ಮಾಡಲಿಲ್ಲ. ಸದನದಲ್ಲಿ ಈ ವಿಚಾರಗಳು ಪ್ರಸ್ತಾಪವಾದಮೇಲೆ ಕರ್ನಾಟಕ ರಾಜ್ಯದ ಜನತೆಗೆ ಈ ಸರ್ಕಾರದಿಂದ ಏನು ಕೆಲಸವಾಗಿಲ್ಲ ಎಂಬುದು ಗೊತ್ತಾಗುತ್ತದೆ. ಆದರೆ, ಇದರು ರಾಜ್ಯದ ಜನತೆಗೆ ಗೊತ್ತಾಗಬಾರದೆಂಬ ಉದ್ದೇಶದಿಂದ ಇವರು ಒಂದು ಸಣ್ಣ ರಿಹರ್ಸಲ್ ಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ದೇವರ ದಯೆಯಿಂದ ಎಲ್ಲವೂ ಕೂಡ ಸುಖಾಂತ್ಯ ವಾಯಿತು. ನೀವು ಏನೊಂದು ನಾಟಕ ಮಾಡಿದ್ದೀರಿ, ಇದು ನಿಜವಾದ ನಾಟಕವೆಂದು ಜನತೆಗೆ ಗೊತ್ತಾಗಿದೆ. ಇದಕ್ಕೆ ನಾನು ಈ ಸದನಕ್ಕೆ ಮತ್ತು ದೇವರಿಗೆ ಖಂಡಿತವಾಗಿ ಕೃತಜ್ಞತೆಗಳನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಈ ರೀತಿಯಾದಂಥ ಸನ್ಮಾನ್ಯ ಶ್ರೀ ಹೆಚ್.ಕೆ. ಪಾಟೀಲ್‌ರವರು ನಿನ್ನೆ ಮತ್ತು ಮೊನ್ನೆ ದಿವಸ ಈ ಸದನದಲ್ಲಿರಲಿಲ್ಲ. ನಿಮ್ಮ ಆಡಳಿತ ಪಕ್ಷದ ಸದಸ್ಯರು ಪ್ರಸ್ತಾಪ ಮಾಡಿದಂಥ ಮಾತನ್ನು ನೀವು ಕೇಳಬೇಕಾಗಿತ್ತು. ಅದನ್ನು ನೀವು ನೋಡಿದ್ದರೆ ಖಂಡಿತವಾಗಿಯೂ ಕೂಡ ನೀವು ಇಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ ಅಥವಾ ಅವರ ಮಾತು ಸರಿಯಿಲ್ಲವೆಂದು ಅವರನ್ನು ವಾಪಸ್ಸು ಕರೆಯುತ್ತಿದ್ದಿರಿ ಎಂದು ನನಗನ್ನಿಸುತ್ತದೆ. ಎರಡು ತಿಂಗಳ ಕಾಲ ಖರೀದಿ ಕೇಂದ್ರಗಳನ್ನು ಮುಂದುವರೆಸಿಕೊಂಡು ಹೋಗಬೇಕೆಂದು ತಾವು ವಿಧಾನಪರಿಷತ್ತಿನಲ್ಲಿ ಉತ್ತರ

ಕೊಟ್ಟಿರತಕ್ಕಂಥಾದ್ದನ್ನು ನಾವು ಕೇಳಿದ್ದೇವೆ. ಇಲ್ಲಿ ಆಡಳಿತ ಪಕ್ಷದವರು ಮಾನ್ಯ ಮುಖ್ಯಮಂತ್ರಿಯವರನ್ನು ಹಾಗೂ ಕೃಷಿ ಮಂತ್ರಿಯವರ ಜೊತೆ ಮಾತನಾಡಿ ಈ ಕೆಲಸವನ್ನು ಮಾಡಿಸಬೇಕಾಗಿತ್ತು. ಆದರೆ ಈ ಕೆಲಸವನ್ನು ಮಾಡಲಿಲ್ಲ. ಇದನ್ನು ಮಾಡುವುದಕ್ಕೆ ಇವರಿಗೆ ಆಸಕ್ತಿ ಕೂಡಿ ಇಲ್ಲ. ಇದರ ಬದಲಾಗಿ ನಾನು ಈಗಾಗಲೇ ಹೇಳಿದಂತೆ ಸಣ್ಣ ನಾಟಕದಮತೆ ರಿಹರ್ಸಲ್ ಮಾಡಿದ್ದಾರೆ. ಇನ್ನು ಮುಂದಾದರೂ ಇಂಥ ಕೆಲಸವನ್ನು ಮಾಡದ ಹಾಗೆ ಒಳ್ಳೆಯ ಬುದ್ಧಿಯನ್ನು ದೇವರು ಕೊಡಲೆಂದು ಹೇಳುತ್ತಾ ನೀವು ಈ ರೀತಿ ಮಾಡಿದರೆ ರೈತರು ನಿಮ್ಮನ್ನು ಕ್ಷಮಿಸುವುದಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಕೇಂದ್ರ ಸರ್ಕಾರದ ಬಜೆಟ್ ಬಗ್ಗೆ ನೀವೆಲ್ಲರೂ ಕುಡ ಪ್ರಸ್ತಾಪ ಮಾಡಿದ್ದೀರಿ, ಇದರ ಬಗ್ಗೆ ನಾನು ಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಕೇಂದ್ರಸರ್ಕಾರದ ಬಜೆಟ್‌ನಲ್ಲಿ ರೈತರಿಗೆ ಕೊಡತಕ್ಕಂಥ ವ್ಯವಸ್ಥೆಯ ಬಗ್ಗೆ ತಾವು ಏನು ಹೇಳಿದ್ದೀರಿ ಎಂದರೆ, ಈ ದೇಶಕ್ಕೆ ಆಮದಾಗಿ ಬರತಕ್ಕಂಥ ಕೃಷಿ ಉತ್ಪನ್ನಗಳು ಮತ್ತು ಪ್ಲಾಂಟೇಶನ್ ಕ್ರಾಪ್‌ಗಳಿಗೆ ಮಾರುಕಟ್ಟೆಯಲ್ಲಿ ನೇರವಾದ ಪರಿಣಾಮ ಬೀರಿದೆ ಎನ್ನತಕ್ಕಂಥ ಮಾತನ್ನು ಅನೇಕ ಬಾರಿ ಎಲ್ಲಾ ಕಡೆಯವರು ಹೇಳಿದ್ದೀರಿ. ಆದರೆ ಇದು ಎಷ್ಟರಮಟ್ಟಿಗೆ ಸತ್ಯ ಎನ್ನತಕ್ಕಂಥಾದ್ದನ್ನು ಕೂಡ ನೀವು ವಿಮರ್ಶೆ ಮಾಡಬೇಕಾಗಿತ್ತು. ಈ ಸಂದರ್ಭದಲ್ಲಿ ಸನ್ಮಾನ್ಯ ಕೃಷಿ ಮಂತ್ರಿಯವರಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ದಯವಿಟ್ಟು ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಇದಕ್ಕೆ ಉತ್ತರ ಕೊಡಬೇಕು. ಪ್ಲಾಂಟೇಷನ್ ಕ್ರಾಪ್ ನಮ್ಮ ದೇಶಕ್ಕೆ ಆಮದಾಗಿ ಬರುವುದರಿಂದ ನಮಗೆ ಯಾವರೀಯಾದ ತೊಂದರೆಗಳು ಆಗುತ್ತವೆ ಎನ್ನತಕ್ಕಂಥಾದ್ದನ್ನು ಕೇವಲ ಭಾಷಣಗಳಲ್ಲಿ ಹೇಳುವುದಲ್ಲ; ಇದನ್ನು ಈ ಸದನಕ್ಕೆ ಮತ್ತು ಕರ್ನಾಟಕ ರಾಜ್ಯದ ರೈತರಿಗೆ ತಿಳಿಸಬೇಕು. ತಪ್ಪು ಮಾಹಿತಿಗಳನ್ನು ರೈತರಿಗೆ ಕೊಡತಕ್ಕಂಥ ಕೆಲಸವನ್ನು ತಾವು ಮಾಡಬಾರದೆಂದು ಸದನದ ಮೂಲಕ ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರೈತರು ಬೆಳೆದರತಕ್ಕಂಥ ಮೆಕ್ಕೆಜೋಳ ಮತ್ತು ಅಕ್ಕಿಯ ಬಗ್ಗೆ ನಮ್ಮ ನಾಯಕರು ಮತ್ತು ಸನ್ಮಾನ್ಯ ಸಿಂಧ್ಯರವರು ಸಾಕಷ್ಟು ಮಾತನಾಡಿದ್ದಾರೆ. ಆದ್ದರಿಂದ, ನಾನು ಅಡಿಕೆ ಬೆಳೆಗಾರರ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಅಡಿಕೆ ಬೆಳೆಗಾರರೂ ಸಹ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನನ್ನ ಕ್ಷೇತ್ರವಾದ ಪುತ್ತೂರು ತಾಲ್ಲೂಕಿನಲ್ಲಿ ವಾಸಪ್ಪಗೌಡ ಎಂಬ ಅಡಿಕೆ ಬೆಳೆಗಾರ, ತಾವು ಮಾಡಿರತಕ್ಕಂಥ ಸಾಲವನ್ನು ತೀರಿಸಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಇದು ಪತ್ರಿಕೆಯಲ್ಲಿ ಬಂದಿದೆ. ಇದನ್ನು ತಾವು ನೋಡಿರಬಹುದು. ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಸನ್ಮಾನ್ಯ ರಮಾನಾಥ್‌ರೈ ರವರು ಈ ವಿಷಯದ ಬಗ್ಗೆ ತಲೆಕೆಡಿಸಿಕೊಂಡಂತೆ ಕಾಣುವುದಿಲ್ಲ. ಇವರ ಸ್ವಕ್ಷೇತ್ರವಾದ ಭಂಟ್ವಾಳದಲ್ಲಿ ಕೂಡ ಅಡಿಕೆ ಬೆಲೆ ಕುಸಿತದಿಂದ ಒಬ್ಬ ಅಡಿಕೆ ಬೆಳೆಗಾರ ಆತ್ಮಹತ್ಯೆ ಮಾಡಿ ಕೊಂಡಿದ್ದಾನೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಈ ವಿಷಯವನ್ನು ಕೃಷಿ ಮಂತ್ರಿಯವರಿಗೆ ತಿಳಿಸತಕ್ಕಂಥ ಸೌಜನ್ಯ ಕೂಡ ಅವರಿಗೆ ಇಲ್ಲ. ಏಕೆಂದರೆ, ಇದರ ಬಗ್ಗೆ ಅವರಿಗೆ ಚಿಂತೆಯೇ ಇಲ್ಲ. ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ರೈತನಿಗೆ ಈ ಪರಿಸ್ಥಿತಿ ಬರುವುದಕ್ಕೆ ಮುಖ್ಯ ಕಾರಣ ಏನೆಂದರೆ, ಇವರೊಳಗಿನ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳುವುದಕ್ಕೋಸ್ಕರ ಸಮಯವನ್ನು ವ್ಯಯ ಮಾಡುತ್ತಿದ್ದಾರೆ. ಹಾಗೆಯೇ ಮಾಹಿತಿ ತಂತ್ರಜ್ಞಾನ ಮತ್ತು ಕಂಪ್ಯೂಟರ್ ಎಂದು ಹೇಳುತ್ತಾ ಪ್ರಚಾರ ಗಿಟ್ಟಿಸುವಂಥ ಕಾರ್ಯದಲ್ಲಿ ಇವರು ತಲ್ಲೀನರಾಗಿದ್ದಾರೆ. ಇದರಿಂದ

ರೈತರ ಬಗ್ಗೆ ಇವರಿಗೆ ಸ್ವಲ್ಪವೂ ಕೂಡ ಆಸಕ್ತಿ ಇಲ್ಲ. ರೈತರು ನಿಮಗೆ ಸುವರ್ಣಾವಕಾಶ ಕೊಟ್ಟು, ನಮಗೇನಾದರೂ ಅನುಕೂಲವಾಗುತ್ತದೆಂದು ಆಲೋಚನೆ ಮಾಡಿ ನಿಮ್ಮನ್ನು ತಂದಿದ್ದಾರೆ. ಆದರೆ ಇವರ ಬಗ್ಗೆ ಚಿಂತನೆ ಮಾಡತಕ್ಕಂಥ ವ್ಯವಸ್ಥೆ ನಿಮ್ಮಲ್ಲಿ ಇಲ್ಲ. ಮಂತ್ರಿಗಳು ಸದನದಲ್ಲಿ ಉಪಸ್ಥಿತರಿದ್ದು, ಸದನದಲ್ಲಿ ನಡೆಯುವ ಕಲಾಪಗಳನ್ನು ತಿಳಿದುಕೊಳ್ಳುವಂಥ ಸಂಯವೂ ಕೂಡ ಅವರಿಗೆ ಇಲ್ಲ. ಇವರ ಹಿಂಬಾಲಕರನ್ನು ಸಮಜಾಯಿಷಿ ಮಾಡತಕ್ಕಂಥ ಕೆಲಸಕ್ಕೆ ಇವರಿಗೆ ಸಮಯ ಸಾಕಗುತ್ತದೆ. ನಿಗಮ, ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಲೆಂದು ಹಿಂಡು ಹಿಂಡು ಜನ ವಿಧಾನಸೌಧ ಮತ್ತು ಶಾಸಕರ ಭವನದ ಸುತ್ತಮುತ್ತಲು ಸೇರಿರುವಂಥಾದ್ದನ್ನು ನಾವು ನೋಡುತ್ತಿದ್ದೇವೆ. ಇವರಲ್ಲಿ ಕೆಲವರು ಆಕ್ರೋಶವನ್ನು ಸಮಾಧಾನ ಮಾಡುವುದಕ್ಕೋಸ್ಕರ ಇವರಿಗೆ ಸಮಯ ಸಾಕಾಗುತ್ತದೆಯೇ ಹೊರತು ರೈತರ ಬಗ್ಗೆ ಚಿಂತನೆ ಮಾಡುವುದಕ್ಕೆ ಇವರಿಗೆ ಸಮಯ ಇಲ್ಲದಂತಾಗಿದೆ. ಈ ರೀತಿ ಆಗಬಾರದು. ಜನರು ನಿಮಗೆ ಆಶೀರ್ವಾದ ಮಾಡಿ ಈ ಸ್ಥಾನಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಿದರೆ ಮತ್ರ ನಿಮಗೆ ಘನತೆ ಗೌರವ ಬರುತ್ತದೆಯೇ ಹೊರತು ಈ ರೀತಿ ಇದ್ದರೆ ಖಂಡಿತ ಬರುವುದಿಲ್ಲ. ಆದ್ದರಿಂದ ಇದರ ಬಗ್ಗೆ ತಾವು ಚಿಂತನೆ ಮಾಡಬೇಕು. ಕಳೆದ ವರ್ಷ ಅಡಿಕೆ ಬೆಳೆಗಾರರು ಮತ್ತು ನಮ್ಮ ಕಡೆಯಿಂದ ರಾಜಕೀಯ ರಹಿತವಾದ ವೇದಿಕೆಯನ್ನು ನಿರ್ಮಾಣ ಮಾಡಿದ್ದೆವು. ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಸಹ ಇದ್ದರು. ಹಾಗೆಯೇ ದೆಹಲಿಯಲ್ಲಿ ಕೇಂದ್ರ ಸರ್ಕಾರದ ಕೃಷಿ ಮಂತ್ರಿಯವರನ್ನು ನೋಡಲು ಹೋದಾಗ ನಮ್ಮ ಜೊತೆ ನಾಲ್ಕು ಜನ ಕಾಂಗ್ರೆಸ್ಸಿನ ಮಂತ್ರಿಯವರು ಸಹ ಇದ್ದರು. ಹಾಗೆಯೇ ದೆಹಲಿಯಲ್ಲಿ ಕೇಂದ್ರ ಸರ್ಕಾರದ ಕೃಷಿ ಮಂತ್ರಿಯವರನ್ನು ನೋಡಲು ಹೋದಾಗ ಸನ್ಮಾನ್ಯ ದೇಶಪಾಂಡೆಯವರು ಮತ್ತು ಮಾನ್ಯ ರಮಾನಾಥ್ ರೈ-ರವರು ಸಹ ಇದ್ದರು. ರಾಜಕೀಯ ರಹಿತವಾದಂಥ ಪರಿಹಾರವನ್ನು ಕಂಡು ಕೊಳ್ಳಬೇಕೆಂಬ ಪ್ರಯತ್ನವನ್ನು ನಾವು ಮಾಡಿದಾಗಲು ಕೂಡ ಈ ಸರ್ಕಾರ ಸ್ವಲ್ಪವೂ ಕೂಡ ಸ್ಪಂದಿಸಲಿಲ್ಲ. ಸನ್ಮಾನ್ಯ ಕಾಗೋಡು ತಿಮ್ಮಪ್ಪನವರ ನೇತೃತ್ವದಲ್ಲಿ ಅಡಿಕೆ ಬೆಳೆಗಾರರ ಅಧ್ಯಕ್ಷರು ಮತ್ತು ಆ ಭಾಗದಲ್ಲಿ ಅಡಿಕೆ ಬೆಳೆಯುತ್ತಿರುವಂಥ ಶಾಸಕರುಗಳು ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಿ ಏನು ವಿನಂತಿ ಮಾಡಿಕೊಂಡೆವೆಂದರೆ, ತೆರಿಗೆಗಳನ್ನು ಮನ್ನ ಮಾಡಬೇಕು ಎನ್ನತಕ್ಕಂಥ ವಿಷಯವನ್ನು ನಾವು ಪ್ರಸ್ತಾಪ ಮಾಡಲಿಲ್ಲ. ತಾತ್ಕಾಲಿಕವಾಗಿ ಮಾರುಕಟ್ಟೆಯ ಮೇಲೆ ನೀವು ವಿಧಿಸಿರತಕ್ಕಂಥ ತೆರಿಗೆಗಳು ಬಹಳ ಪರಿಣಾಮ ಬೀರುತ್ತವೆ...

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಪೆಪ್ಸಿ ಕೋಲಾ ಮತ್ತು ಇತರೇ ದೊಡ್ಡ ದೊಡ್ಡ ಉದ್ದಿಮೆಗಳಿಗೆ ತೆರಿಗೆಯನ್ನು ಮನ್ನಾ ಮಾಡುವುದಾದರೆ, ಇದಕ್ಕೆ ಏಕೆ ತೆರಿಗೆಯನ್ನು ಮನ್ನಾ ಮಾಡಬಾರದು? ಇದಕ್ಕೂ ಸಹ ತೆರಿಗೆಯನ್ನು ಮಾಡಲೇಬೇಕಾಗುತ್ತದೆ.

ಶ್ರೀ ಡಿ.ವಿ.ಸದಾನಂದ ಗೌಡ:- ಟ್ರಯಲ್ ಬೇಸಿಸ್ ಮೇಲೆ ಎರಡು ತಿಂಗಳ ಕಾಲದವರೆಗೆ ಅಡಿಕೆ ಮಾರುಕಟ್ಟೆಯಲ್ಲಿ ತಾವು ವಿಧಿಸಿರತಕ್ಕಂಥ ತೆರಿಗೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕೆಂದು ಆ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರನ್ನು ನಾವು ಕೇಳಿಕೊಂಡೆವು. 4 ಪರ್ಸೆಂಟ್ ಮಾರಾಟ ತೆರಿಗೆ ಮತ್ತು 1 ಪರ್ಸೆಂಟ್ ವಹಿವಾಟು ತೆರಿಗೆ ಮತ್ತು 1 ಪರ್ಸೆಂಟ್ ಎ ಪಿ ಎಂಸಿ ತೆರಿಗೆಗಳನ್ನು ತಾತ್ಕಾಲಿಕವಾಗಿ ಸ್ವಲ್ಪ ದಿನಗಳ ಕಾಲ ಸ್ಥಗಿತಗೊಳಿಸಿ ಮಾರುಕಟ್ಟೆಯಲ್ಲಿ ಯಾವ ರೀತಿಯಾಗಿ ಪರಿಣಾಮ ಆಗುತ್ತದೆ ಎಂಬುದನ್ನು ನೋಡಬೇಕೆಂದು ಮಾನ್ಯ

ಮುಖ್ಯಮಂತ್ರಿಯವರನ್ನು ಭೇಟಿ ಮಾಡಲು ಹೋದಂಥ ನಿಯೋಗದಲ್ಲಿ ಆ ಭಾಗದ ಶಾಸಕರು ಮತ್ತು ಮಂತ್ರಿಯವರು ಸಹ ಇದ್ದರು. ಇದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಭರವಸೆಯನ್ನುಕೊಟ್ಟರು. ಆದರೆ ಸುಳ್ಳಕ್ಕೆ ಸನ್ಮಾನ್ಯ ಮುಖ್ಯಮಂತ್ರಿಯವರು ಬಂದಂಥ ಸಂದರ್ಭದಲ್ಲಿ ಅಡಿಕೆ ಬೆಳೆಗಾರರನ್ನು ಉದ್ದೇಶಿಸಿ ಏನು ಹೇಳಿದರು ಎಂದರೆ, ಅಡಿಕೆ ಬೆಳೆಯ ಮೇಲೆ ಇರತಕ್ಕಂಥ ಯಾವುದೇ ತೆರಿಗೆಯನ್ನು ತಾತ್ಕಾಲಿಕವಾಗಿ ಸ್ಥಗಿತ ಮಾಡುವಂಥ ಕೆಲಸವನ್ನು ನನ್ನ ಸರ್ಕಾರ ಮಾಡುವುದಿಲ್ಲವೆಂದು ಘೋಷಣೆ ಮಾಡಿ ಬಂದಿದ್ದಾರೆ. ಇಲ್ಲಿ ಏನು ಪರಿಸ್ಥಿತಿಯಾಗಿದೆ ಎಂಬುದನ್ನು ಎಲ್ಲರೂ ಸಹ ನೋಡಬೇಕಾಗುತ್ತದೆ. ತಾತ್ಕಾಲಿಕವಾಗಿ ತೆರಿಗೆಯನ್ನು ಸ್ಥಗಿತ ಮಾಡಿ, ರೈತರ ಮಾರುಕಟ್ಟೆ ವ್ಯವಸ್ಥೆಯಲ್ಲಿ ಯಾವರೀತಿಯಾಗಿ ಏರುಪೇರು ಆಗುತ್ತದೆ ಎಂಬುದನ್ನು ನೋಡುವುದಕ್ಕೋಸ್ಕರ ಟ್ರಯಲ್ ಬೇಸಿಸ್ ಮಾಡಿ ಎಂದು ಹೇಳಿದರೂ ಕೂಡ ಇದಕ್ಕೆ ಸ್ಪಂದನೆ ಮಾಡುವಂಥ ಮಾನವೀಯ ಸೌಜನ್ಯತೆ ಕೂಡ ನಿಮ್ಮ ಸರ್ಕಾರಕ್ಕೆ ಇಲ್ಲ ಎನ್ನತಕ್ಕಂಥಾದ್ದನ್ನು ನಾನು ತುಂಬಾ ಬೇಸರದಿಂದ ಹೇಳಬೇಕಾಗಿದೆ. ಇದಕ್ಕೆ ಜನರು ತಕ್ಕ ತೀರ್ಮಾನವನ್ನು ಕೊಡುತ್ತಾರೆ. ಆದ್ದರಿಂದ ಇದರ ಬಗ್ಗೆ ನಾವೇನೂ ಹೇಳಬೇಕಾಗಿಲ್ಲ. ಹಿಂದೆ ಒಂದುಕ್ವಿಂಟಾಲ್ ಅಡಿಕೆಗೆ ಸುಮಾರು 15 ರಿಂದ 17 ಸಾವಿರ ರೂಪಾಯಿಗಳಷ್ಟು ಬೆಲೆ ಇದ್ದಂಥ ಅಡಿಕೆ, ಇವತ್ತು ಕೇವಲ 5 ರಿಂದ 6 ಸಾವಿರ ರೂಪಾಯಿಗಳಿಗೆ ಇಳಿದಿದೆ. ಕಳೆದ ಬಾರಿ ಸಹಕಾರ ಸಂಘಗಳಿಂದ ಮತ್ತು ಬೇರೆ ಬೇರೆ ಬ್ಯಾಂಕ್‌ಗಳಿಂದ ರೈತರು ಪಡೆದುಕೊಂಡಿರತಕ್ಕಂತಹ ಸಾಲವನ್ನು ಈಗ ಮರು ಪಾವತಿ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ರೈತ ಇಲ್ಲ. ಇಲ್ಲಿಯೂ ಕೂಡ ಸರ್ಕಾರ ದ್ವಂದ್ವನೀತಿಯನ್ನು ಅನುಸರಿಸುತ್ತಿದೆ. ಅದೇನೆಂದರೆ, ಸಾಲ ಮತ್ತು ಬಡ್ಡಿ ಮನ್ನಾ ಮಾಡುವುದಿಲ್ಲ, ಹಾಗೆಯೇ ದೀರ್ಘಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುವುದಿಲ್ಲವೆಂದು ಇವತ್ತು ಬೆಳಿಗ್ಗೆ ಮಾನ್ಯ ಸಹಕಾರ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಹೇಳಿದರು. ಆದರೆ ಮಂಗಳೂರು ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ಇವರ ಪಕ್ಷದ ವತಿಯಿಂದ ಈಗಾಗಲೇ ಆಡಳಿತ ನಡೆಸುತ್ತಿರುವ ಬ್ಯಾಂಕಿನ ಅಧ್ಯಕ್ಷರು ಏನು ಹೇಳಿದ್ದಾರೆಂದರೆ, ದೀರ್ಘಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುತ್ತೇವೆ ಎನ್ನತಕ್ಕಂಥ ಘೋಷಣೆಯನ್ನು ಮಾಡಿದ್ದಾರೆ. ಆದರೆ ಸಹಕಾರ ಮಂತ್ರಿಯವರು ಸದನದಲ್ಲಿ ಕುಳಿತುಕೊಂಡು ರೈತರ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲದೆ, ನಬಾರ್ಡ್ ಗೈಡ್‌ಲೆನ್ಸ್ ಪ್ರಕಾರ ಸಾಲ ಮತ್ತು ತೆರಿಗೆಯನ್ನು ಮನ್ನಾ ಮಾಡುವುದಿಲ್ಲವೆಂದು ರೈತರ ಮೇಲೆ ದಾಳಿ ಮಾಡುತ್ತಿದ್ದಾರೆ. ಈ ರೀತಿಯಾದ ದ್ವಂದ್ವ ನೀತಿಯನ್ನು ಏಕೆ ಮಾಡುತ್ತೀರಿ ? ಅಲ್ಲಿ ಹೋದಾಗ ಮಂತ್ರಿಗಳ ಸಮಕ್ಷಮದಲ್ಲಿ ಘೋಷಣೆಯನ್ನು ಮಾಡಿದಂಥ ಸಂದರ್ಭ ಏಕೆ ಮಂತ್ರಿಗಳು ಹೇಳಲಿಲ್ಲ, ಆಗ ಅವರಿಗೆ ಈ ವ್ಯವಸ್ಥೆ ಗೊತ್ತಿರಲಿಲ್ಲವೇ? ಮೊನ್ನೆ ಎಪಿಎಂಸಿ ಮಂತ್ರಿಗಳು ಬಂದಿದ್ದರು. ಆವರ್ತನಿಧಿ ವಿಷಯಕ್ಕೆ ನಾನು ಬರುತ್ತೇನೆ, ನಿಜವಾಗಿ ನಾವು ಅದನ್ನು ನೋಡಬೇಕು. ಎಪಿ ಎಂಸಿ ಮಂತ್ರಿಗಳು ಬಂದಾಗ ಅಲ್ಲಿ ಮಾಡಿದ ನಾಟಕ ಬಹಳ ಚೆನ್ನಾಗಿದೆ. ಅಡಿಕೆ ಬೆಳೆಗಾರರನ್ನು ಸೇರಿಸಿ ಅಡಿಕೆ ಬೆಳೆಗೆ ಪರ್ಯಾಯವಾದ ಒಂದು ಪರಿಹಾರವನ್ನು ಹುಡುಕಬೇಕು ಎಂದು ಸನ್ಮಾನ್ಯ ವೀರಪ್ಪ ಮೊಯ್ಲಿಯವರ ನೇತೃತ್ವದಲ್ಲಿ ಮಂಗಳೂರಿನ ಎಪಿ ಎಂಸಿ ಮಾರ್ಕೆಟ್‌ನಲ್ಲಿ ಒಂದು ಸಭೆ ನಡೆಯಿತು. ಅಲ್ಲಿ ಏನು ಹೇಳಿದರು ಗೊತ್ತೆ? ಎಪಿ ಎಂಸಿ ಮಂತ್ರಿಗಳು ಇಲ್ಲಿ ಉಪಸ್ಥಿತರಿರಬೇಕಿತ್ತು. ಈಗ ಅವರು ಇರುವುದಿಲ್ಲ. ಒಂದು

ವಾರದೊಳಗಾಗಿ ಅಡಿಕೆ ಮಾರುಕಟ್ಟೆ ಇವತ್ತಿಗಿಂತ ಕ್ವಿಂಟಾಲ್‌ಗೆ 10 ಸಾವಿರ ರೂಪಾಯಿಗಳವರೆಗೆ ಏರುವಂತೆ ನಾವು ಆ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಿದ್ದರು. ಅವರು ಬಂದು ಹೋಗಿ 10 ದಿವಸಗಳಾಯಿತು. ಅವರು ಇನ್ನು ಬೇರೆ ಬೇರೆ ವಿಚಾರಗಳನ್ನು ಕೂಡ ಹೇಳಿದ್ದರು. ದಕ್ಷಿಣ ಕನ್ನಡ ಜಿಲ್ಲೆಗೆ ಎಪಿ ಎಂಸಿ ಮಾರುಕಟ್ಟೆಯನ್ನು ಸ್ಥಳಾಂತರ ಮಾಡಿದಂಥ ಸರ್ಕಾರದವರು ಇವತ್ತು ಮಾರುಕಟ್ಟೆಯಲ್ಲಿ ಧಾರಣೆಯನ್ನು ಸ್ಥಿರೀಕರಣಗೊಳಿಸುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ನೀವು ಈ ರೀತಿಯಾದ ನಾಟಕವನ್ನು ಆಡಬಾರದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಕೆ ಬೆಳೆಗಳ ಬೆಳೆಗಳಲ್ಲಿ ಕುಸಿತವಾಯಿತು? ಕಳೆದ ಬಾರಿ ವಿಧಾನ ಮಂಡಲದಲ್ಲಿ ಚರ್ಚೆಯಾದಾಗ ಅದರ ಬಗ್ಗೆ ಪ್ರಸ್ತಾಪ ಮಾಡುವಂಥ ಕೆಲಸಗಳು ಇಲ್ಲಿ ಆಗಿವೆಯೆ? ಏಕೆ ಅದಕ್ಕೆ ನೀವು ಉತ್ತರವನ್ನು ಕೊಡುವ ಗೋಜಿಗೆ ಹೋಗಲಿಲ್ಲ? ಇವರು ವಿಧಾನಸಭೆಯ ಒಳಗಡೆ ಯಾವುದೇ ರೀತಿಯ ಉತ್ತರವನ್ನು ಕೊಡುವುದಿಲ್ಲ. ವಿಧಾನಸಭೆಯಿಂದ ಹೊರಗಡೆ ಹೋಗಿ ಸಾಧಾರಣವಾದ ಪಕ್ಷದ ವೇದಿಕೆಯಲ್ಲಿ ಅಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುವ ಪ್ರಯತ್ನವನ್ನು ಮಾಡಿ ರೈತರ ಮೇಲೆ ಸವಾರಿ ಮಾಡುವ ಕೆಲಸವನ್ನು ನಿಮ್ಮ ಸರ್ಕಾರದವರು ಮಾಡುತ್ತಿದ್ದೀರಿ. ನಮ್ಮ ಹೇಳಿಕೆಗೆ ನಿಮ್ಮ ಸ್ಪಂದನೆ ಇದೆಯೇ? ನಾವು ನಿಮ್ಮನ್ನು ಏನು ಕೇಳಿದೆವು? ನಿಮ್ಮ ಸರ್ಕಾರದ ಕಡೆಯಿಂದ ತೆರಿಗೆ ಲುಕ್ಸಾನ ಆಗದ ರೀತಿಯಲ್ಲಿ ತೆರಿಗೆಯ ಸ್ಥಗಿತವನ್ನು ಕೇಳಿದ್ದೇವೆ. ಇದಕ್ಕೆ ನಿಮ್ಮ ಸ್ಪಂದನೆ ಇಲ್ಲ. ಇವತ್ತು ನಮ್ಮ ಬೇಡಿಕೆ ಇದೆ. ಷಾರ್ಟ್ ಟರ್ಮ್ ಲೋನನ್ನು ಮಧ್ಯಮಾವಧಿ ಸಾಲವನ್ನಾಗಿ, ಮಧ್ಯಮಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಿ. ಅಡಿಕೆ ಮಾರುಕಟ್ಟೆಯನ್ನು ಇವತ್ತು ನಿಯಂತ್ರಣ ಮಾಡುವಂಥದ್ದು ಇವತ್ತು ಸಹಕಾರಿ ಸಂಘಗಳಲ್ಲಿ ಇಲ್ಲ. ಕೆಲವೊಂದು ಸಹಕಾರ ಸಂಘಗಳು ತಮ್ಮಲ್ಲಿರುವ ಎಲ್ಲ ಬಂಡವಾಳವನ್ನು ಸುರಿದು ಇವತ್ತು ಅಡಿಕೆ ಮಾರುಕಟ್ಟೆಯಲ್ಲಿ ನಮ್ಮ ಪ್ರಯತ್ನವನ್ನು ಮಾಡುತ್ತಿದ್ದೇನೆ. ಅಡಿಕೆ ಮಾರುಕಟ್ಟೆಯಲ್ಲಿ ಅವರ ಪ್ರಯತ್ನ ಶೇಕಡಾ 10 ರಷ್ಟು ಮಾತ್ರ ಆಗತ್ತದೆ, ಅವರಿಗೆ ದುಡ್ಡು ಇಲ್ಲ. ಮೊನ್ನೆ ಮೊನ್ನೆ ನಾವು ದೆಹಲಿಗೆ ಹೋಗಿದ್ದೆವು. ಕೇಂದ್ರ ಸರ್ಕಾರದವರು ಮಾಡಿದ್ದರ ಬಗ್ಗೆ ನಾವು ಇಲ್ಲಿ ಶ್ಲಾಘನೆ ಮಾಡಲೇಬೇಕಾಗಿದೆ. ಅಡಿಕೆ ಬೆಳೆಗಾರರ ಬಗ್ಗೆ ನಾವು ಅವರನ್ನು ಅಭಿನಂದಿಸಲೇಬೇಕಾಗಿದೆ. ಕೇಂದ್ರ ಸರ್ಕಾರಕ್ಕೆ ನಾವು ಹೋಗಿ ಕೃಷಿ ಮಂತ್ರಿಗಳನ್ನು ಭೇಟಿ ಮಾಡಿದಾಗ ಅವರು ಏನು ಮಾಡಿದರು ಗೊತ್ತೆ? ಶೇಕಡಾ 100 ರಷ್ಟು ತೆರಿಗೆಯನ್ನು ಏರಿಸುವುದರ ಮುಖಾಂತರ 100 ಪರ್ಸೆಂಟ್ ಇಂಪೋರ್ಟ್ ಡ್ಯೂಟಿ ಮಾಡಿದ್ದರ ಬಗ್ಗೆ ನಾವು ಕೇಂದ್ರ ಸರ್ಕಾರ ರೈತರ ಬಗ್ಗೆ ಗೌರವಯುತವಾದ ಕೆಲಸವನ್ನು ಮಾಡಿದ್ದರ ಅದು ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಸರ್ಕಾರವೆಂದು ನಾನು ಹೇಳಬೇಕಾಗುತ್ತದೆ. ನಾನು ಇದರ ಬಗ್ಗೆ ಘಂಟಾಘೋಷವಾಗಿ ಈ ಸದನದಲ್ಲಿ ಹೇಳಬೇಕಾಗಿದೆ. ಇದನ್ನು ಯಾರೂ ಮಾಡಲಿಲ್ಲ.

+ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಕಡೂರು) : ಮಾನ್ಯ ಉಪಾಧ್ಯಕ್ಷರೆ, ಇಂಪೋರ್ಟ್ ಡ್ಯೂಟಿ 100 ಪರ್ಸೆಂಟ್ ಏರಿಸಿದ್ದು ಸರಿ, ಅದರಿಂದ ಏನಾಯಿತೆಂದರೆ, ಮೂರು ಸಾವಿರ ರೂಪಾಯಿಗಳು ಇರುವ ಜಾಲಿ ಅಡಿಕೆ 3500 ರೂಪಾಯಿಗಳವರೆಗೆ ಆಯಿತು. 100 ಪರ್ಸೆಂಟ್ ಟ್ಯಾಕ್ಸ್ ರೈಜ್ ಮಾಡಿದ ತಕ್ಷಣ ಏಕಾಯಿತೆಂದರೆ, ಕೆಲವು ಕಳ್ಳಸಾಗಾಣಿಕೆದಾರರು ಅದನ್ನು ಡ್ರೈಫ್ರೂಟ್ಸ್ ಎಂದು ಇಂಪೋರ್ಟ್ ಮಾಡಿಕೊಳ್ಳುತ್ತಿದ್ದಾರೆ. ಅದನ್ನು ಹೇಗೆ ತಡೆಯುವುದು? ಡ್ರೈಫ್ರೂಟ್ಸ್‌ಗೆ ಟ್ಯಾಕ್ಸ್ ಇರುವುದಿಲ್ಲ. ಕೆಂಪು ಅಡಿಕೆಯನ್ನು ಒಣಗಿದ ಫ್ರೂಟ್ಸ್ ಎಂದು ಇಂಪೋರ್ಟ್ಸ್ ಮಾಡಿಕೊಳ್ಳುತ್ತಾರೆ. ಇದರ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಇನ್ನೊಂದು ವಿಚಾರ ಮಾನ್ಯ ಸದಾನಂದಗೌಡರ

ಮಾತಿಗೆ ಬೆಂಬಲವನ್ನು ಕೊಟ್ಟು ಹೇಳತಕ್ಕಂಥದ್ದೆಂದರೆ, ಟಿ.ಓ.ಟಿ.ಯನ್ನು ಇವತ್ತು ಹಾಕುತ್ತಿರುವುದನ್ನು ರದ್ದು ಮಾಡಬೇಕಾಗುತ್ತದೆ. ಎರಡನೆಯದಾಗಿ ಮಲ್ಬಿಪ್ಲೈ ಟ್ಯಾಕ್ಸ್ ಏನಿದೆ ಇದರಿಂದ ಅಡಿಕೆ ಧಾರಣೆ ಇಳಿಯುವುದಕ್ಕೆ ಮೊದಲನೇ ಕಾರಣ. ಮತ್ತು ಟಿ.ಓ.ಟಿ. ಟ್ಯಾಕ್ಸ್; ಎರಡು ವಿಷಯದ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕು. ನಾವು ಟ್ಯಾಕ್ಸ್ ಕೊಡುವುದಕ್ಕೆ ತಯಾರಾಗಿದ್ದೇವೆ. ನೀವು ಹೇಳಿದಷ್ಟನ್ನು ಟ್ಯಾಕ್ಸ್ ಕೊಡುವುದಕ್ಕೆ ನಾವು ತಯಾರಿದ್ದೇವೆ, ಎಲ್ಲೆಲ್ಲಿ ಹೋಗುತ್ತದೆ ಅಲ್ಲಿ ಎಲ್ಲಾ ಕಡೆ ಟ್ಯಾಕ್ಸ್ ಕೊಡಬೇಕೆಂದರೆ ನಮ್ಮಿಂದ ಕೊಡುವುದಕ್ಕಾಗುವುದಿಲ್ಲ. ಅದಕ್ಕಾಗಿ ನಾವು ಮಾನ್ಯ ಎಪಿಎಂಸಿ ಸಚಿವರಿಗೆ ಹಾಗೂ ಮುಖ್ಯಮಂತ್ರಿಗಳಿಗೆ ಒತ್ತಡವನ್ನು ತರುತ್ತೇವೆ, ಮಲ್ಬಿಪ್ಲೈ ಟ್ಯಾಕ್ಸ್‌ನ್ನು ನಿಲ್ಲಿಸಬೇಕಾಗುತ್ತದೆ. ನೀವು ಕೇಂದ್ರ ಸರ್ಕಾರಕ್ಕೆ ಒತ್ತಡವನ್ನು ತಂದು ಡೈಫ್ರೂಟ್ಸ್ ಇಂಪೋರ್ಟ್ ಮಾಡಿಕೊಳ್ಳುವುದನ್ನು ನಿಲ್ಲಿಸದೇ ಹೋದರೆ ಅಡಿಕೆ ಬೆಲೆ ಇನ್ನೂ ಕುಸಿಯುತ್ತದೆ. ಈ ಎರಡು ವಿಷಯಗಳ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ನಾನು ಮಾನ್ಯ ಸದಾನಂದಗೌಡರ ಮಾತಿಗೆ ಬೆಂಬಲವನ್ನು ಕೊಟ್ಟು ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಾನಂದಗೌಡರ ಒಪ್ಪಿಗೆ ಮೇರೆಗೆ ಒಂದು ವಿಷಯವನ್ನು ಹೇಳುತ್ತೇನೆ. ಮಾನ್ಯ ಕೃಷಿ ಸಚಿವರು ಇಲ್ಲಿಯೇ ಇರುತ್ತಾರೆ. ಎರಡು ವಿಷಯಗಳ ಬಗ್ಗೆ ಈ ತಕ್ಷಣದಲ್ಲಿಯೇ ಅಡಿಕೆ ಬೆಳೆಗಾರರನ್ನು ಕಾಡುತ್ತಿದೆ. ಉತ್ತರವನ್ನು ಕೊಡುವ ಸಮಯದಲ್ಲಿ ಸರ್ಕಾರದ ನಿಲುವನ್ನು ತಕ್ಷಣದಲ್ಲಿಯೇ ಹೇಳಬೇಕು. ದೀರ್ಘಕಾಲಿಕವಾಗಿ ಯಾವುದಕ್ಕೆ ಸ್ಪಂಧಿಸಬೇಕು ಎನ್ನುವುದಕ್ಕೆ ಮಾನ್ಯ ಸದಾನಂದಗೌಡರು ಏನು ಹೇಳುತ್ತಿದ್ದಾರೆ ಅದಕ್ಕೆ ಸ್ಪಂಧಿಸಬೇಕು. ನಾನು ಶಿರ್ಸಿ, ಅಂಕೋಲ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದವನಾಗಿದ್ದೇನೆ. ಯಾವುದೇ ಜಿಲ್ಲೆಯವರಾಗಿರಬಹುದು ಅವರು ಅಡಿಕೆ ವ್ಯಾಪಾರವನ್ನು ಸಂಪೂರ್ಣವಾಗಿ ಬಂದು ಮಾಡಿದ್ದಾರೆ. ಸರ್ಕಾರದ ನೀತಿಯಿಂದ ರೈತರ ಗಾಯದ ಮೇಲೆ ಬರೆ ಎಳೆದಂತಾಗಿದೆ. ಕಳೆದ 5 ವರ್ಷಗಳ ಹಿಂದೆ ವ್ಯಾಪಾರ ಮಾಡಿದ್ದಕ್ಕೂ ಕೂಡ ಟಿ.ಓ.ಟಿ. ಟ್ಯಾಕ್ಸ್‌ನ್ನು ಹಾಕುತ್ತಿದ್ದೇವೆಂದು ಹೇಳುತ್ತಿದ್ದಾರೆ. ಕಡೂರು ಹಾಗೂ ಕೆಲವೊಂದು ಕಡೆ ನೋಟೀಸ್‌ನ್ನು ಕೊಟ್ಟಿದ್ದಾರೆ. ಕಳೆದ 3 ವರ್ಷಗಳ ಹಿಂದೆ ವ್ಯಾಪಾರ ಮಾಡಿದ್ದಕ್ಕೆ ಟಿ.ಓ.ಟಿ.ಟ್ಯಾಕ್ಸ್‌ನ್ನು ಹಾಕುತ್ತೇವೆಂದು ಹೇಳುವುದು ಯಾವುದೇ ಪ್ರಗತಿಪರ ಸರ್ಕಾರದ ಧೋರಣೆಯಾಗುವುದಿಲ್ಲ. ಎಲ್ಲಾ ವ್ಯಾಪಾರ ಬಂದಾಗಿದೆ, ರೈತರು ಬೆಲೆ ಇಲ್ಲದಿರುವುದರಿಂದ ಕಣ್ಣೀರು ಇಡುತ್ತಿದ್ದಾರೆ. ಮಾರ್ಚ್ ತಿಂಗಳ ಕೊನೆಯೊಳಗಾಗಿ ಕೋ-ಆಪರೇಟಿವ್ ಬ್ಯಾಂಕಿನಿಂದ ತೆಗೆದುಕೊಂಡಿರುವುದಕ್ಕೆ ರೈತರು ಸಾಲವನ್ನು ತುಂಬಬೇಕಾಗಿದೆ. ಅವರು ವ್ಯಾಪಾರವನ್ನು ಬಂದ್ ಮಾಡಿದ ಮೇಲೆ ನಾವು ವ್ಯಾಪಾರವನ್ನು ಎಲ್ಲಿ ಮಾಡುವುದು? ಅಡಿಕೆ ಮಾರಲಿಕ್ಕೆ ಆಗದಂಥ ಸ್ಥಿತಿಯಾಗಿದೆ. ಅದಕ್ಕಾಗಿ ಟಿ.ಓ.ಟಿ. ಟ್ಯಾಕ್ಸ್ ಬಗ್ಗೆ ಸರ್ಕಾರ ತಕ್ಷಣದಲ್ಲಿ ಸದನದಲ್ಲಿ ಹೇಳಬೇಕು. ಈಗಾಗಲೇ ಹೇಳಿದಂತೆ ಮಲ್ಬಿಪ್ಲೈ ಟ್ಯಾಕ್ಸ್ ಪ್ರತಿ ಊರಿನಲ್ಲಿ ಒಂದು ಪರ್ಸೆಂಟ್ ಕೊಡಬೇಕೆಂದು ಬಂದಿರುವ ಪರಿಸ್ಥಿತಿಯಿಂದ ನೇರವಾಗಿ ವ್ಯಾಪಾರಸ್ಥರಿಗೆ ಸಂಬಂಧಪಟ್ಟ ಅಂಶವೆಂದು ಅನ್ನಿಸಿದರೂ ಕೂಡ ಇದು ಪರೋಕ್ಷವಾಗಿ ರೈತರನ್ನು ಕಾಡುತ್ತಿದೆ. ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ರೈತರು ಬೆಳೆದಂತಹ ಬೆಳೆಗಳಿಗೆ ಬೆಲೆ ಇಲ್ಲದಂತಹ ಪರಿಸ್ಥಿತಿಯಲ್ಲಿ ಈ ರೀತಿಯಾದ ಸರ್ಕಾರದ ನಿಲುವಿನಿಂದ ವ್ಯಾಪಾರ ಮಾಡದಂಥ ಪರಿಸ್ಥಿತಿ ನಿರ್ಮಾಣವಾದರೆ ರೈತರಿಗೆ ಇನ್ನಷ್ಟು ಸರ್ಕಾರದವರು ಬರೆ ಎಳೆದಂತಾಗುತ್ತದೆ, ಸರ್ಕಾರ ಉತ್ತರವನ್ನು ಕೊಡುವಾಗ ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) ಮಾನ್ಯ ಉಪಾಧ್ಯಕ್ಷರೆ, ನಾವು ರೈತರ ಬಗ್ಗೆ ಮಾತನಾಡುವಾಗ ಎಪಿಎಂಸಿ ಸಚಿವರು ಹಾಗೂ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು ಯಾರು ಇಲ್ಲಿ ಇರುವುದಿಲ್ಲ. ಮಲ್ಟಿಪ್ಲೆಕ್ಸ್ ಟ್ಯಾಕ್ಸ್ ಬಗ್ಗೆ ಮಾತನಾಡಿದ್ದಕ್ಕೆ ಸರ್ಕಾರ ಉತ್ತರ ಕೊಡಬೇಕು; ಯಾರು ಸಚಿವರು ಇರುವುದಿಲ್ಲ?

ಶ್ರೀ ಎಸ್.ಎಸ್ ಪಾಟೀಲ್ (ಮುಂಡರಗಿ) : ಮಾನ್ಯ ಉಪಾಧ್ಯಕ್ಷರೆ, ಕಳೆದ ಎರಡು ದಿವಸಗಳ ಹಿಂದೆ ಈ ಸದನ ತುಂಬಿ ಹೋಗಿತ್ತು. ಇವರು ರೈತರ ಬಗ್ಗೆ ಚಿಂತನೆ ಮಾಡುವವರು, ಇವರು ರೈತನ ಸಮಾಧಿಯ ಮೇಲೆ ಏನೋ ಕಟ್ಟುವುದಕ್ಕೆ ಹೊರಟಿದ್ದಾರೆ. ನಿಯಮ 69ರ ಮೇಲೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ಅದರ ಬಗ್ಗೆ ಇಲ್ಲಿ ಚರ್ಚೆ ನಡೆದಿದೆ, ಯಾವ ಮಂತ್ರಿಗಳು ಇರುವುದಿಲ್ಲ? ಯಾವ ಶಾಸಕರು ಕೂಡ ಇರುವುದಿಲ್ಲ? ನಾನು ಎರಡು ಕಡೆಯ ಶಾಸಕರನ್ನು ಉದ್ದೇಶಿಸಿ ಹೇಳುತ್ತಿದ್ದೇನೆ. ಗಂಭೀರವಾಗಿ ಚರ್ಚೆ ನಡೆದಿರುವಾಗ ಯಾರಿಗೂ ಇದರ ಬಗ್ಗೆ ಕಾಳಜಿ ಇಲ್ಲ. ಎರಡು ದಿವಸ ಮಾಡಿರುವ ಹೋರಾಟದ ಬಗ್ಗೆ ಜನರಿಗೆ ಏನು ಅನ್ನಿಸುತ್ತದೆ? ರೈತರು ನಮ್ಮ ಮೇಲೆ ಏನು ತಿಳಿದುಕೊಳ್ಳುತ್ತಾರೆ? ಬಾವಿಗೆ ಎಲ್ಲರೂ ತಾ ಮುಂದು, ತಾ ಮುಂದು ಎನ್ನುವ ತರಹ ಬಂದರು. ರೈತರ ಮೇಲೆ ಸುಮ್ಮನೆ ರಾಜಕೀಯ ಮಾಡುವುದು, ಚರ್ಚೆ ನಡೆದಿರುವ ಈ ಸಮಯದಲ್ಲಿ ಯಾರು ಇರುವುದಿಲ್ಲ.

ಉಪಾಧ್ಯಕ್ಷರು : ತಾವು ಹೆಚ್ಚಿಗೆ ಮಾತನಾಡಲಿ ಎಂದು ಹೋಗಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಹಾಗಾದರೆ ಸದನಕ್ಕೆ ಏನು ಮಹತ್ವ ಬರುತ್ತದೆ?

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಖರ್ಗೆಯವರು ವಿರೋಧಪಕ್ಷದ ನಾಯಕರಾಗಿದ್ದಾಗ ಅವರು ಚುಚ್ಚಿ ಚುಚ್ಚಿ ಮಾತನಾಡಿದ್ದನ್ನು ನಮಗೆ ಕೇಳಿ ಸಾಕಾಗಿ ಹೋಗಿತ್ತು. ವಿರೋಧ ಪಕ್ಷದಲ್ಲಿದ್ದಾಗ ಒಂದು ತರಹ, ಆಡಳಿತ ಪಕ್ಷದಲ್ಲಿದ್ದಾಗ ಒಂದು ತರಹ ಇರುವುದನ್ನು ಅವರು ಬಿಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನಾನು ಯಾವಾಗಲಾದರೂ ಕೂಡ ಸದನವನ್ನು ಬಿಟ್ಟು ಹೋಗಿದ್ದೇನೆಯೇ? ನಾನು ಯಾವ ಕಡೆ ಇದ್ದರೂ ಸಹ ಸದನದಲ್ಲಿ ಕುಳಿತುಕೊಳ್ಳುತ್ತೇನೆ. ವಿರೋಧಪಕ್ಷದ ನಾಯಕರಾದವರು ಮಂತ್ರಿಗಳು ಆಗಬಾರದೆಂದು ನನಗೆ ಅನ್ನಿಸುತ್ತದೆ; ಬಹಳ ತೊಂದರೆ ಇರುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಖರ್ಗೆಯವರದ್ದು ಒಂದು ಜೀವನ ಸಿದ್ಧಾಂತ; ನಾನು ಹೇಳಿದಂತೆ ಕೇಳು, ಆದರೆ ನಾನು ಮಾಡಿದಂತೆ ಮಾಡಬೇಡ ಎಂದು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ ಮಾತನಾಡುತ್ತೇನೆ. ಬೀ.ಜಿ. ಯವರ ಕಥೆಎ ಪುಸ್ತಕದಲ್ಲಿ ತಿಮ್ಮನ ಬಗ್ಗೆ ಬರೆದಿರುವ ಒಂದು ಕಥೆ ನೆನಪಾಗುತ್ತದೆ, ತಿಮ್ಮನು ಶಾಲೆಗೆ ಹೋಗಿರುತ್ತಾನೆ. ಶಾಲೆಯಲ್ಲಿ ತಿಮ್ಮನು ಕುಳಿತು ಕೊಂಡಿರುವಾಗ ಅವನ ಹಿಂದೆ ಒಬ್ಬನು ತೂಕಡಿಸಿಕೊಂಡು ಕುಳಿತಿರುತ್ತಾನೆ. ಆಗ ಮಾಸ್ತರರು ಬರುತ್ತಾರೆ, ತಿಮ್ಮ ಮಾಸ್ತರನ್ನು ಏನಾದರೂ ಅಭ್ಯಾಸ ಕೇಳಬೇಕೆಂದು ಕುಳಿತುಕೊಂಡಿರುತ್ತಾನೆ. ಹಿಂದೆ ಕುಳಿತಿರುವ ಹುಡುಗನು ಕೂಡ ಬೇಜಾರಾಗಿ ಎದ್ದು ಹೋಗುತ್ತಾನೆ. ಆಗ ತಿಮ್ಮನು ಗುರುಗಳನ್ನು ಕೇಳುತ್ತಾನೆ; ಗುರುಗಳೆ, ಇದ್ದವನು ಕೂಡ ಒಬ್ಬ

ಎದ್ದು ಹೋದನು ನಾವು ಈಗ ಇಬ್ಬರೇ ಇರುವುದರಿಂದ ತಾವು ಹೇಳಬೇಕೆಂದು ಕೇಳುತ್ತಾನೆ. ಆಗ ಗುರುಗಳು ಪ್ರಾರಂಭ ಮಾಡುವುದಕ್ಕೆ ಇದೇನು ವಿಧಾನಸಭೆ ಅಧಿವೇಶನ ಏನು ಎಂದು ಹೇಳುತ್ತಾನೆ. ಹೀಗಾಗಿದೆ ನಮ್ಮ ಸ್ಥಿತಿ.

ಶ್ರೀ ಡಿ.ವಿ. ಸದಾನಂದಗೌಡ : ಅತ್ಯಂತ ಗಂಭೀರವಾದಂತಹ ವಿಷಯ ಚರ್ಚೆಯಾಗತಕ್ಕಂತಹ ಸಂದರ್ಭದಲ್ಲಿ ಒಂದು ಚೂರು ಗಂಭೀರತೆ ಇಲ್ಲದೆ ಇರತಕ್ಕಂತಹ ವ್ಯವಸ್ಥೆ ಸರ್ಕಾರದ ವತಿಯಿಂದ ಇಲ್ಲಿ ನಡೆಯುತ್ತಿದೆಂದು ಹೇಳುವುದಾದರೆ, ಇವತ್ತಿನ ಸಂದರ್ಭದಲ್ಲಿ ಮಂತ್ರಿಗಳು ಉಪಸ್ಥಿತರಿಲ್ಲದಿರತಕ್ಕದ್ದಕ್ಕೆ ಸದಸ್ಯರೇ ಕಾರಣ. ಹಾಗೆಯೇ ಮಾನ್ಯ ಉಪಾಧ್ಯಕ್ಷರು ತಮ್ಮ ಬಲಭಾಗದಲ್ಲಿ ವೀಕ್ಷಣೆ ಮಾಡಬೇಕು. ತಮ್ಮ ಬಲಭಾಗದಲ್ಲಿರತಕ್ಕಂತಹ ಅಧಿಕಾರಿಗಳ ಕುರ್ಚಿಗಳೆಲ್ಲಾ ಇವತ್ತು ಖಾಲಿಯಾಗಿವೆ. ಈ ಭಾಗದಲ್ಲಿರತಕ್ಕಂತಹವರನ್ನು ತಾವು ಗಣನೆಗೆ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ, ಏಕೆಂದರೆ ಜನರೂ ಕೂಡ ತಮ್ಮಲೆಕ್ಕದಿಂದ ಇವರನ್ನು ಬಿಡುತ್ತಿದ್ದಾರೆ. ಆದ್ದರಿಂದ ಆಡಳಿತ ಪಕ್ಷದವರನ್ನು ನಾನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಆದರೆ ತಮ್ಮ ಬಲಭಾಗದಲ್ಲಿರುವಂತಹ ಅಧಿಕಾರಿಗಳು ಸಹ ಖಾಲಿಯಾಗಿವೆ, ಈ ರೀತಿ ಆಗಬಾರದು ಎಂದು ನಮ್ಮ ಕಾಳಜಿಯಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಇಲ್ಲಿರತಕ್ಕಂತಹ ಸಮಸ್ಯೆ ಏನೆಂದರೆ, ಅವರವರಲ್ಲಿಯೇ ಪ್ರತಿಭಟನೆ ನಡೆಯುತ್ತಿದೆ. ಇದನ್ನು ಸರಿಪರಿಸಿಕೊಳ್ಳುವುದಕ್ಕೋಸ್ಕರ ಕೆಲವರು ಹೋಗಿದ್ದಾರೆ.

ಶ್ರೀ ಅಮರಗೌಡ ಲಿಂಗನಗೌಡ ಬಯ್ಯಾಪುರ : ಈಗಿನ ಸ್ಥಿತಿಯಲ್ಲಿ ನಾವು ಸಭೆಯನ್ನು ಮುಂದುವರಿಸುವುದು ಸೂಕ್ತವಾದುದಲ್ಲ, ಆದ್ದರಿಂದ ಸಭೆಯನ್ನು ಮುಂದೂಡುವುದು ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಸದನದಲ್ಲಿ ಕೃಷಿ ಮಂತ್ರಿಗಳು, ಮಾರುಕಟ್ಟೆ ಸಚಿವರು, ಸಣ್ಣ ನೀರಾವರಿ ಸಚಿವರು, ಆರೋಗ್ಯ ಸಚಿವರು ಕುಳಿತು ಕೊಂಡಿದ್ದಾರೆ, ನೀವು ಸುಮ್ಮಸುಮ್ಮನೆ ಮಂತ್ರಿಗಳು ಇಲ್ಲವೆಂದು ಹೇಳುವುದು ಸರಿಯಲ್ಲ. ಇದಕ್ಕೆ ಸಂಬಂಧಪಟ್ಟಂತಹ ಕೃಷಿ ಮಂತ್ರಿಗಳಿದ್ದಾರೆ, ಎಪಿಎಂಸಿ ಮಂತ್ರಿಗಳಿದ್ದಾರೆ.

1.40 ಪಿ.ಎಂ.

ಶ್ರೀ ಸಿ. ಚೆನ್ನಿಗಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟ ತೋಟಗಾರಿಕಾ ಸಚಿವರು ಎಲ್ಲಿ ಇದ್ದಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೃಷಿ ಮಂತ್ರಿಗಳು ಸದನದಲ್ಲಿದ್ದಾರೆ, ನಿಮಗೆ ಬೇಕಾದಂತಹ ರೆವಿನ್ಯೂ ಹಾಗೂ ಪಿಡಬ್ಲ್ಯೂಡಿ ಮಂತ್ರಿಗಳು ಬಂದಿದ್ದಾರೆ, ಮತ್ತೇ ಪುನಃ ನಿಮಗೆ ಯಾರು ಬೇಕು?

ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) ಈ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಾನಂದಗೌಡರು ಇದಕ್ಕೆ ಪರಿಹಾರ ಸಿಗಬೇಕೆನ್ನುವ ಬಗ್ಗೆ ಸದನದಲ್ಲಿ ಚರ್ಚೆ ಮಾಡುತ್ತಿದ್ದಾರೆ. ಈಗ ಎಪಿಎಂಸಿ ಸಚಿವರು ಸದನಕ್ಕೆ ಬಂದಿದ್ದಾರೆ ಕಡೂರು ಮತ್ತು ಶಿವಮೊಗ್ಗಗಳಲ್ಲಿ ಅಡಿಕೆ ಮಾರ್ಕೆಟ್‌ಗಳು ಸ್ಥಗಿತವಾಗಿದೆ; ಇದರ ಬಗ್ಗೆ ನಮಗೆ ಆಶ್ವಾಸನೆ ಬೇಕಾಗಿದೆ. ಟಿ.ಒ.ಟಿ. ಟ್ಯಾಕ್ಸ್ ಬಗ್ಗೆ ಮುಂದೆ ಏನು ಕಾನೂನು ಬರುತ್ತದೆ, ಅಲ್ಲಿಯವರೆಗೆ ನೋಟೀಸ್ ಕೊಟ್ಟಿರುವುದರ ಬಗ್ಗೆ ಅದನ್ನು ತಡೆಯಿಡಿಯಬೇಕು.

5 ಲಕ್ಷ ರೂಪಾಯಿಗಳ ಟಿಒಟಿಯನ್ನು ಕಟ್ಟಬೇಕಾದರೆ ಅದರ 3 ಪಟ್ಟು ಪೆನಾಲ್ಟಿಯನ್ನು ಹೆಚ್ಚಿಸಿ 20 ಲಕ್ಷ ರೂಪಾಯಿಗಳವರೆಗೆ ನೋಟೀಸ್‌ನ್ನು ಕೊಟ್ಟಿರುವಂತಹ ಘಟನೆಗಳು ಕಡೂರಿನಲ್ಲಿ ನಡೆದಿವೆ. ಮಲ್ಟಿಪಾಯಿಂಟ್ ಟ್ಯಾಕ್ಸ್‌ನ ಬಗ್ಗೆ ಪ್ರತಿಭಟನೆಯು ನಡೆಯುತ್ತಿದೆ. ದಯಮಾಡಿ ಇದರ ಬಗ್ಗೆ ಸಂಬಂಧಪಟ್ಟ ಎಪಿಎಂಸಿ ಸಚಿವರು ಸದನಕ್ಕೆ ಬಂದಿದ್ದಾರೆ, ಅವರು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದರೆ ಅಲ್ಲಿ ಮಾರ್ಕೆಟ್ ಪ್ರಾರಂಭವಾಗುತ್ತದೆ; ಇಲ್ಲದಿದ್ದರೆ ಇನ್ನು ಒಂದು ತಿಂಗಳಾದರೂ ಸಹ ಪ್ರಾರಂಭವಾಗುವುದಿಲ್ಲ; ಇದರಿಂದಾಗಿ ರೈತರಿಗೆ ಬಹಳಷ್ಟು ತೊಂದರೆಯಾಗುತ್ತದೆ. ದಯಮಾಡಿ ನಾನು ಮಾನ್ಯ ಮಂತ್ರಿಗಳಲ್ಲಿ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.....

ಉಪಾಧ್ಯಕ್ಷರು : ಮಾನ್ಯ ಮಲ್ಲಿಕಾರ್ಜುನರವರೆ ಮಾನ್ಯ ಸದಾನಂದಗೌಡರಿಗೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಡಬೇಕು.

ಶ್ರೀ ಕೆ.ಬಿ.ಮಲ್ಲಿಕಾರ್ಜುನ : ಮಾನ್ಯ ಮಂತ್ರಿಗಳು ಸದನಕ್ಕೆ ಬಂದಿದ್ದಾರೆಂದು ನಾನು ಅವರ ಗಮನವನ್ನು ಸೆಳೆಯುತ್ತಿದ್ದೇನೆ. ನಾನು ವಿಷಯವನ್ನು ಪ್ರಸ್ತಾಪ ಮಾಡಿದಾಗ ಮಾನ್ಯ ಮಂತ್ರಿಗಳು ಸದನದಲ್ಲಿರಲಿಲ್ಲ.

ಉಪಾಧ್ಯಕ್ಷರು : ನೀವೆಲ್ಲರೂ ಈ ರೀತಿ ಮಾತನಾಡುತ್ತಾ ಹೋದರೆ ವಿಷಯಕ್ಕೆ ಬರುವುದೇ ಇಲ್ಲ.

+ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಉಪಾಧ್ಯಕ್ಷರೆ, ನನಗೆ ಎಪಿಎಂಸಿ ಸಚಿವರ ಬಗ್ಗೆ ತುಂಬಾ ಕನಿಕರವಾಗುತ್ತದೆ. ಏಕೆಂದರೆ, ಅವರು ಎಲ್ಲದರಲ್ಲಿಯೂ ಸಹ ಅಸಹಾಯಕರಾಗಿದ್ದಾರೆ. ಯಾವುದಾದರೂ ಒಂದು ಜಿಲ್ಲೆಯಲ್ಲಿ ಏನಾದರೊಂದು ಕೆಲಸ ಆಗಬೇಕೆಂದು ಸ್ಥಳೀಯ ಜನರು ಹೇಳಿದರೂ ಸಹ ಬೇರೆ ಕಡೆಯಿಂದ ಹೆಚ್ಚಿನ ಒತ್ತಡ ಬಂದಾಗ ಆ ಒತ್ತಡಕ್ಕೆ ಮಣಿದು ಸಂಬಂಧಪಟ್ಟ ಕೆಲಸವನ್ನು ಮಾಡುತ್ತಾರೆ. ಇದಕ್ಕೆ ಸಂಬಂಧಪಟ್ಟ ಉದಾಹರಣೆಯನ್ನು ನಾನು ಕಳೆದ ಸದನದಲ್ಲಿ ಕೊಟ್ಟಿದ್ದೇನೆ, ನಾನು ಈಗಾಗಲೇ ಪ್ರಸ್ತಾಪ ಮಾಡಿದ ಬಗ್ಗೆ ಅಂಕಿಅಂಶಗಳನ್ನು ತರಿಸಿ ತಾವು ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ. ಇದು ಸಮರ್ಪಕವಾಗಿಲ್ಲ ಎಂಬುದರ ಬಗ್ಗೆ ನಾನು ಸವಾಲು ಹಾಕುವುದಕ್ಕೆ ತಯಾರಿದ್ದೇನೆ. ಪುತ್ತೂರು ಎಪಿಎಂಸಿಯಲ್ಲಿ ಕಳೆದ ಒಂದು ತಿಂಗಳಿಂದ ಎಷ್ಟು ಎಪಿಎಂಸಿ ಸೆಸ್‌ಗಳು ಕಲೆಕ್ಟ್ ಆಗಿದೆ ಎಂಬುದರ ಬಗ್ಗೆ ಇವರು ಅಂಕಿಅಂಶಗಳನ್ನು ತರಿಸಬೇಕು. ಅದಕ್ಕಿಂತ ಮೊದಲು 3 ತಿಂಗಳು ಎಷ್ಟು ಸೆಸ್‌ಗಳು ಬರುತ್ತಿತ್ತು ಎಂಬುದರ ಬಗ್ಗೆಯೂ ಸಹ ಅಂಕಿಅಂಶಗಳನ್ನು ತರಿಸಬೇಕು. ಪುತ್ತೂರಿನಲ್ಲಿ ಎಪಿಎಂಸಿಯ ಆಡಳಿತಾಧಿಕಾರಿಯಾಗಿ ಅಲ್ಲಿ ಅಸಿಸ್ಟೆಂಟ್ ಕಮೀಷನರ್‌ರವರು ಇದ್ದರು. ಅವರು ಅತ್ಯಂತ ಶಿಸ್ತಿನ ಅಧಿಕಾರಿಯಾಗಿದ್ದರು, ಅವರು ಏನು ಮಾಡುತ್ತಿದ್ದರೆಂದರೆ ತೆರಿಗೆಗಳನ್ನು ತಡೆಗಟ್ಟಿ ಅತ್ಯಂತ ಹೆಚ್ಚು ತೆರಿಗೆಯನ್ನು ವಸೂಲು ಮಾಡುತ್ತಿದ್ದರು. ಅಲ್ಲಿರುವಂತಹ ವರ್ತಕರು ಮತ್ತಿತರು ಸೇರಿಕೊಂಡು ಜಿಲ್ಲಾ ಉಸ್ತುವಾರಿ ಮಂತ್ರಿಗಳ ಹತ್ತಿರ ಹೋದರು. ಇದು ಹೌದೋ ಅಥವಾ ಅಲ್ಲವೋ ಎಂಬುದನ್ನು ನೀವು ಹೇಳಬೇಕು. ಇದು ಅಲ್ಲವೆಂದು ತಾವು ಹೇಳಿದರೆ ನಾನು ಈ ಸದನದಲ್ಲಿ ಇನ್ನು ಮುಂದೆ ಮಾತನಾಡುವುದಿಲ್ಲ. ಆ ಉಸ್ತುವಾರಿ ಮಂತ್ರಿಗಳ ಮುಖಾಂತರ ಎಸಿಯವರ ಅಧಿಕಾರವನ್ನು ತೆಗೆಯಬೇಕೆಂದು ಹೇಳಿದರು. ಎಸಿಯವರಲ್ಲಿದ್ದಂತಹ ಆಡಳಿತಾಧಿಕಾರವನ್ನು ತೆಗೆದು ತಹಶೀಲ್ದಾರ್‌ರವರಿಗೆ ಕೊಟ್ಟರು, ಅವರು ಏನು ಪ್ರಯೋಜನವಿಲ್ಲದವರ; ಅವರು ಹಾಸ್ಪಿಟಲ್‌ನಲ್ಲಿದ್ದರು. ಎಪಿಎಂಸಿಯನ್ನು ರೈಡ್ ಮಾಡಿದರೆ ಮಾತ್ರ ನಿಮಗೆ ಈ ಎಲ್ಲಾ ಮಾಹಿತಿಗಳು ಸಿಗುತ್ತದೆ. ಇವರು ಮೊನ್ನೆತಾನೇ ಬಂದು ಚಾರ್ಜ್‌ನ್ನು

ತೆಗೆದುಕೊಂಡಿದ್ದಾರೆ; ಕಳೆದ ಒಂದೂವರೆ ತಿಂಗಳಿನಿಂದ ಯಾವುದೇ ರೀತಿಯ ಟ್ಯಾಕ್ಸ್ ಕಲೆಕ್ಷನ್‌ಗಳು ಆಗಿಲ್ಲ. ನಾನು ಇದರ ಬಗ್ಗೆ ಕಳೆದ ಬಾರಿ ಪ್ರಸ್ತಾಪ ಮಾಡಿದ್ದೆ, ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಲ್ಲೂ ಸಹ ಕೇಳಿದ್ದೇನೆ. ಅದಕ್ಕೆ ಮಾನ್ಯ ಮಂತ್ರಿಗಳು ಏನೋ ಸ್ವಲ್ಪ ಒತ್ತಡಗಳ ಕಾರಣದಿಂದ ವ್ಯತ್ಯಾಸವಾಗಿದೆ ಎಂದು ಅವರು ನನ್ನಲ್ಲಿ ನೇರವಾಗಿ ಹೇಳಿದರು. ನಾನು ಇದನ್ನು ತಮಗೆ ನೇರವಾಗಿ ಹೇಳುತ್ತಿದ್ದೇನೆ, ಈ ರೀತಿಯ ಒತ್ತಡಕ್ಕೆ ಮಣಿದು ಕೆಲಸ ಮಾಡುವಂತಹ ಯಾವುದೇ ಮಂತ್ರಿಗಳು ಕೂಡ ಸಮಾಜಕ್ಕೆ ಸ್ಪಂದನೆ ಮಾಡುವಂತಹ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಇವರ ಬಗ್ಗೆ ಸ್ಪಷ್ಟ ನಿಲುವುಗಳು, ಸ್ಪಷ್ಟ ಧೋರಣೆಗಳು ಆ ಒಂದು ವಿಚಾರದ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರ ರೀತಿಯಲ್ಲಿರಬೇಕು. ಅವರು ಯಾರೇ ಆಗಲಿ ನಿರ್ದಾಕ್ಷಿಣ್ಯವಾಗಿ ಕೆಲಸಗಳನ್ನು ಮಾಡಬೇಕೆನ್ನುವ ರೀತಿಯಲ್ಲಿ ಮಂತ್ರಿಗಳಿರಬೇಕು. ಇಂತಹ ರೀತಿಯಲ್ಲಿ ಕಾಳಜಿ ಇರುವಂತಹ ಮಂತ್ರಿಗಳು ಈ ರೈತರಿಗೆ ಏನು ಮಾಡುವುದಕ್ಕೆ ಸಾಧ್ಯವೆಂದು ನಾನು ಹೇಳುತ್ತಿದ್ದೇನೆ. ಮಾನ್ಯ ಮಾರುಕಟ್ಟೆ ಸಚಿವರು ಮೊನ್ನೆ ಮಂಗಳೂರಿಗೆ ಬಂದು ಏನು ಮಾಡಿದ್ದೀರೆಂದು ಆಮೇಲೆ ಹೇಳುತ್ತೇನೆ. ನೀವು ಆಮೇಲೆ ಉತ್ತರವನ್ನು ಕೊಡಿ. ಮಾನ್ಯ ಗೃಹಮಂತ್ರಿಗಳಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮಾರುಕಟ್ಟೆ ಸಚಿವರನ್ನು ಕರೆಸಿ ಎಂದು ಹೇಳಿದರು, ಆಗ ತಾವು ಇರಬೇಕಾಗಿತ್ತು, ನಾನು ಅದನ್ನು ಈಗ ಹೇಳುತ್ತಿದ್ದೇನೆ. ಮೊನ್ನೆ ದಿನ ತಾವು ಮತ್ತು ವೀರಪ್ಪ ಮೊಯಿಲಿಯವರು ಮಂಗಳೂರಿಗೆ ಬಂದು ನಾಟಕ ಆಡಿದ್ದೀರಲ್ಲಾ, ಇವತ್ತಿನವರೆಗೆ ತಾವು ಏನು ಮಾಡಿದ್ದೀರಿ? ಟ್ಯಾಕ್ಸ್ ಎಗ್ಜೆಂಪ್ಷನ್ ಮಾಡಿದ್ದೀರಾ? ನಿಮ್ಮ ಸಮಕ್ಷಮದಲ್ಲಿ ಕೇಂದ್ರ ಬ್ಯಾಂಕಿನ ಅಧ್ಯಕ್ಷರು ಇದ್ದಾರಲ್ಲಾ ಅವರು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುತ್ತೇನೆಂದು ಹೇಳಿದ್ದಾರೆ. ಇಲ್ಲಿ ಇವತ್ತು ನಿಮ್ಮ ಮಂತ್ರಿಗಳು ಏನು ಹೇಳಿದ್ದಾರೆ? ನಾವು ಯಾವುದೇ ರೀತಿಯಲ್ಲಿ ಸಾಲವನ್ನು ಮುಂದೂಡುವುದಕ್ಕೆ ಆಗುವುದಿಲ್ಲ ಮತ್ತು ಬಡ್ಡಿಯನ್ನು ಸಹ ಮನ್ನಾ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ನಿಮ್ಮದೇ ಆಡಳಿತವಿರುವಂತಹ ಒಂದು ಕೇಂದ್ರ ಸಹಕಾರ ಬ್ಯಾಂಕ್‌ನ ಅಧ್ಯಕ್ಷರು, ನಿಮ್ಮ ಮಂತ್ರಿಗಳ ಸಮ್ಮುಖದಲ್ಲಿ ಮಧ್ಯಮಾವಧಿ ಸಾಲಗಳನ್ನು ದೀರ್ಘಾವಧಿ ಸಾಲಗಳನ್ನಾಗಿ ಪರಿವರ್ತನೆ ಮಾಡುತ್ತೇವೆಂದು ಮಂಗಳೂರಿನಲ್ಲಿ ಹೇಳಿದ್ದರು. ಹೀಗೆ ದ್ವಂದ್ವನೀತಿಯನ್ನು ಏಕೆ ಹೇಳುತ್ತಿದ್ದೀರಿ? ತಾವು ಹೇಳಿರುವ ಬಗ್ಗೆ ಪತ್ರಿಕೆಯಲ್ಲಿ ಪ್ರಕಟವಾಗಿದೆ, ಆ ಪತ್ರಿಕೆಯು ನನ್ನ ಬಿಳಿ ಇದೆ. ಒಂದು ವಾರದೊಳಗಾಗಿ ಅಡಿಕೆ ಮಾರುಕಟ್ಟೆ ಸುಮಾರು ಕ್ವಿಂಟಾಲ್‌ಗೆ 10 ಸಾವಿರ ರೂಪಾಯಿಗಳಷ್ಟು ಏರುತ್ತದೆಂದು ಹೇಳಿದ್ದೀರಿ, ನೀವು ಬಂದ ಮೇಲೆ ಅದು ಇಳಿದಿದೆ. ಈ ಪರಿಸ್ಥಿತಿಯ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ತಾವು ಈ ಬಗ್ಗೆ ಎಲ್ಲವನ್ನು ನೋಟ್ ಮಾಡಿಕೊಂಡು ನಂತರ ಉತ್ತರವನ್ನು ಕೊಡಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂತಹ ಪುತ್ತೂರಿನ ಎಪಿಎಂಸಿ ಯಾರ್ಡ್‌ಗೆ ಕಳೆದು 8 ವರ್ಷಗಳಿಂದ ಮಾರ್ಕೆಟ್ ಇನ್ನೂ ಶಿಫ್ಟ್ ಆಗಲಿಲ್ಲ. ಆ ಮಾರ್ಕೆಟ್‌ನ್ನು ಶಿಫ್ಟ್ ಮಾಡುವಂತಹ ಪ್ರಯತ್ನಗಳು ಸಹ ಆಗುತ್ತಿಲ್ಲ; ಇದು ಕೋರ್ಟಿನಲ್ಲಿದೆ, ಆದಕಾರಣ ಶಿಫ್ಟ್ ಮಾಡುವುದಕ್ಕೆ ಆಗುತ್ತಿಲ್ಲವೆಂದು ಹೇಳುತ್ತಾರೆ. ಇದಕ್ಕೆ ಪರಿಹಾರವನ್ನು ಕಂಡುಕೊಳ್ಳುವಂತಹ ಪ್ರಯತ್ನವನ್ನೂ ಕೂಡ ಮಾಡುತ್ತಿಲ್ಲ, ಇದಕ್ಕಾಗಿ ಕೋಟಿಗಟ್ಟಲೆ ಹಣ ಖರ್ಚಾಗಿದೆ. ಮಂಗಳೂರಿನ ಎಪಿಎಂಸಿ ಯಾರ್ಡ್ ಎಂದರೆ ನಮ್ಮ ಲೆಕ್ಕಾಚಾರಗಳೆಲ್ಲಾ ಕೌಂಟಿಂಗ್ ಆಗುತ್ತಿರುತ್ತದೆ. ಇದು ರೈತರಿಗಾಗಿ ಇರುವಂತಹದ್ದು ಅಲ್ಲ, ಲೋಕಸಭೆ ಹಾಗೂ ವಿಧಾನಸಭೆಯ ಮತ ಎಣಿಕೆಗಾಗಿ ಎಪಿಎಂಸಿ ಯಾರ್ಡ್ ಕೇಂದ್ರವಾಗಿದೆ, ಇದು ಎಪಿಎಂಸಿಯ ಕಥೆಯಾಗಿದೆ. ಅದನ್ನು ಸರಿಪಡಿಸುವಂತಹ ಕೆಲಸ ಇವತ್ತು ಎಪಿಎಂಸಿಯ ಮಂತ್ರಿಗಳಿಗೆ ಇಲ್ಲ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಉಪಾಧ್ಯಕ್ಷರೆ, ಮಂಗಳೂರಿನಲ್ಲಿ ಎಪಿಎಂಸಿ ಯಾರ್ಡ್‌ನ್ನು ಸುಮಾರು 20 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿದ್ದಾರೆ. ಇವತ್ತಿನವರೆಗೂ ಕೂಡ ಒಂದೇ ಒಂದು ಸೇಲ್ಸ್ ಕೂಡ ಆಗಿರುವುದಿಲ್ಲ, ಅದು ಹೆಸರಿಗೆ ಮಾತ್ರ ಎಪಿಎಂಸಿ ಯಾರ್ಡ್ ಆಗಿದೆ.

ಶ್ರೀ ಡಿ.ವಿ. ಸದಾನಂದಗೌಡ : ನಾನು ಆ ಬಗ್ಗೆ ಅಬ್ಜಕ್ಷನ್ ಮಾಡುತ್ತಿಲ್ಲ, ಪುತ್ತೂರು, ಮಂಗಳೂರು, ಸುಳ್ಯ ಎಪಿಎಂಸಿಯಿಂದ ಎಷ್ಟು ತೆರಿಗೆ ಹಣ ಕಲೆಕ್ಟ್ ಆಗಿದೆ ಎನ್ನುವ ಬಗ್ಗೆ ಈ ಸದನಕ್ಕೆ ಅಂಕಿಅಂಶಗಳನ್ನು ಕೊಡುತ್ತೇನೆ. ಇವರು ಅಲ್ಲಿ ಎಪಿಎಂಸಿ ಯಾರ್ಡ್‌ನಲ್ಲಿ ವ್ಯವಹಾರವನ್ನು ಮಾಡಿಸುವುದಕ್ಕೆ ಆಗುತ್ತಿಲ್ಲ, ಆದರೆ ಎಪಿಎಂಸಿಯಿಂದ ಸೆಸ್‌ನ್ನು ತರಿಸಿ ಅವರ್ತ ನಿಧಿಗೆ ಉಪಯೋಗವನ್ನು ಮಾಡಿಕೊಳ್ಳುತ್ತಿದ್ದಾರೆ. ಈ ಅವರ್ತನಿಧಿಗೆ ಯಾರು ಹಣವನ್ನು ಕೂಡಬೇಕು? ಇದಕ್ಕೆ ರಾಜ್ಯ ಸರ್ಕಾರದ ಖಜಾನೆಯಿಂದ ಹಣವನ್ನು ಕೊಡಬೇಕಾಗಿತ್ತು? ಎಪಿಎಂಸಿಯಲ್ಲಿರುವಂತಹ ಹಣ ಅಲ್ಲಿರುವಂತಹ ರಸ್ತೆಗಳ ಸೌಲಭ್ಯ, ರೈತನ ಸಾಗಾಣಿಕೆಯ ಬಾಕಿ ವ್ಯವಸ್ಥೆಗಳಿಗೆ, ಮಾರುಕಟ್ಟೆಯ ವ್ಯವಸ್ಥೆಗಾಗಿ ಹಣವನ್ನು ಖರ್ಚು ಮಾಡಬೇಕಾಗಿತ್ತು. ಇವರು ಅದನ್ನು ಮಾಡಿದ್ದಾರೆಯೇ? ಕರ್ನಾಟಕ ಸರ್ಕಾರ ಅವರ್ತನಿಧಿಗೆ 100 ಕೋಟಿ ರೂಪಾಯಿಗಳು ಇದ್ದದ್ದು ಈಗ ಅದು ಕೇವಲ 75 ಕೋಟಿ ರೂಪಾಯಿಗಳಾಗಿದೆ. ಈಗ ಕಲೆಕ್ಷನ್ ಆಗಿರುವುದು ಕೇವಲ 26. 17 ಕೋಟಿ ರೂಪಾಯಿಗಳು ಮಾತ್ರ. ಈ ರೀತಿಯಾಗಿ ಯಾವುದಕ್ಕೆ ಏನು ವ್ಯವಸ್ಥೆಯನ್ನು ಮಾಡಬೇಕೋ ಅದನ್ನು ಇವರು ಮಾಡುತ್ತಿಲ್ಲ. ದಿನನಿತ್ಯ ಪತ್ರಿಕೆಗಳಲ್ಲಿ ಹೆಡ್‌ಲೈನ್ಸ್‌ನಲ್ಲಿ ಸ್ಟೇಟ್‌ಮೆಂಟ್‌ಗಳು ಬರುತ್ತಿದೆ. ಈ ರೀತಿ ವ್ಯವಸ್ಥೆಗಳು ಇರುವುದು ಸರಿಯೇ? ಎಪಿಎಂಸಿಗಳನ್ನು ಇನ್ನು ಸರಿ ಮಾಡುವುದಕ್ಕೆ ಆಗದಿದ್ದರೆ ರೈತರ ಪರಿಸ್ಥಿತಿ ಸುಧಾರಣೆಯಾಗುವುದಾದರೂ ಹೇಗೆ? ಇವತ್ತು ಎಪಿಎಂಸಿಯಲ್ಲಿ ಏನಿದೆ? ರೈತನು ಮಾರುಕಟ್ಟೆಗೆ ತಂದಂತಹ ವಸ್ತುವಿಗೆ ಸರಿಯಾದಂತಹ ಮಾರುಕಟ್ಟೆ ಸಿಗದಿದ್ದರೆ, ಆ ವಸ್ತುವನ್ನು ಎಪಿಎಂಸಿ ಮಾರುಕಟ್ಟೆಯಲ್ಲಿಟ್ಟು ಅವನಿಗೆ ತಕ್ಷಣ ಅದರ ಮೌಲ್ಯದ 75 ರಷ್ಟು ಮೊತ್ತವನ್ನು ಕೊಡಬೇಕು. ಮತ್ತೆ 3 ತಿಂಗಳಲ್ಲಿ ಅದನ್ನು ಮಾರಾಟ ಮಾಡಿದ ನಂತರ ಬಡ್ಡಿ ರಹಿತವಾಗಿ ಅದನ್ನು ಮರುಪಾವತಿ ಮಾಡಬೇಕು ಎಂದು ಹೇಳಿದ್ದೀರಿ. ಇದು ಯಾರಿಗಾದರೂ ಸಿಕ್ಕಿದೆಯೆ? ಇಡೀ ಕರ್ನಾಟಕ ರಾಜ್ಯದಲಿ ಯಾರಾದರೊಬ್ಬ ರೈತನಿಗೆ ಇದರಿಂದ ಸದುಪಯೋಗವನ್ನು ಪಡೆದುಕೊಂಡಿದ್ದಾನೆಯೇ? ಈ ವ್ಯವಸ್ಥೆಗಳು ಏತಕ್ಕಾಗಿ ಬೇಕು ಎಂದು ನಾನು ಕೇಳುತ್ತಿದ್ದೇನೆ. ಇವರು ರೈತನ ಬಗ್ಗೆ ಮೊಸಳೆ ಕಣ್ಣೀರನ್ನು ಹಾಕುತ್ತಾರೆ, ರೈತನ ಬಗ್ಗೆ ನಾಟಕವನ್ನಾಡುತ್ತಾರೆ; ಈ ರೀತಿಯಾಗಬಾರದು. ರೈತನ ಬಗ್ಗೆ ಕಾಳಜಿ ಇದ್ದರೆ ನಾವು ಮಾಡಿದಂತಹ ಕೆಲಸಗಳನ್ನು ಕನಿಷ್ಟ ಅನುಷ್ಠಾನಕ್ಕೆ ತರುವಂತಹದ್ದು ಆಗಬೇಕು. ಆ ಕೆಲಸಗಳನ್ನು ಮೊನ್ನೆ ಕೇಂದ್ರಸರ್ಕಾರದವರು ಮಾಡಿದ್ದಾರೆಂದು ನಾನು ಕೃಷಿ ಸಚಿವರಿಗೆ ಹೇಳಿದ್ದೇನೆ. ಅಡಿಕೆ ಬೆಳೆಯ ಬಗ್ಗೆ ನಾವೆಲ್ಲರೂ ಮತ್ತು ಮಾನ್ಯ ಸಚಿವರಾದ ಶ್ರೀ ರಮಾನಾಥರೈ, ಮತ್ತು ಮತ್ತೊಬ್ಬ ಸಚಿವರಾದ ಶ್ರೀ ದೇಶಪಾಂಡೆಯವರು ನಾವೆಲ್ಲರೂ ಕೇಂದ್ರ ಸರ್ಕಾರಕ್ಕೆ ಹೋದಾಗ ಕೃಷಿ ಮಂತ್ರಿಗಳು ನೂರರಷ್ಟು ಏರಿಸುವಂತಹ ಕೆಲಸವನ್ನು ಮಾಡಿದರು.

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಅದು 100 ಪರ್ಸೆಂಟ್ ಏರುವ ಮುಂಚೆ ಅದು ಎಷ್ಟು ಪರ್ಸೆಂಟ್ ಇತ್ತು? ಆ ಸಂದರ್ಭದಲ್ಲಿ ಅಡಿಕೆ ಬೆಳೆಯುವಂತಾದ್ದು ನಮ್ಮ ಕರ್ನಾಟಕದಲ್ಲಿ ಅಲ್ಲದೆ ಬೇರೆ ಕಡೆ ಇಲ್ಲ. ಆ ಸಂದರ್ಭದಲ್ಲಾದರೂ ಕೂಡ ಎಷ್ಟು ಟ್ಯಾಕ್ಸ್

ಹಾಕಬಹುದು ಎಂದು ಹೇಳಲಿಲ್ಲ. 100 ಪರ್ಸೆಂಟ್ ಟ್ಯಾಕ್ಸ್ ಹಾಕಿದರೂ ಪರಿಣಾಮ ಏನು ಆಗಲಿಲ್ಲ ಏಕೆಂದರೆ ರಾಷ್ಟ್ರಕ್ಕೆ ಬರಬೇಕಾದ ಸ್ಟಾಕ್ ಬಂದು ಆಗಿತ್ತು. ಈ ರಾಷ್ಟ್ರಕ್ಕೆ ಬರಬೇಕಾದ ಟ್ಯಾಕ್ಸ್ ಆವತ್ತೇ ಬಂದು ಹೋಯಿತು. ಆವತ್ತೆ ಡಿಸ್‌ಚಾರ್ಜ್ ಆಗಿ ಹೋಯಿತು. ಅದರಿಂದ ಬೆಲೆ ಕುಸಿತವಾಯಿತು.

ಶ್ರೀ ಡಿ.ವಿ. ಸದಾನಂದಗೌಡ : ಆಯಿತು, ಅದನ್ನು ನಾನು ಹೇಳಿಬಿಡುತ್ತೇನೆ. ತಾವು ಹೇಳುವುದು, ಮತ್ತೊಂದು ಏನು ಹೇಳುತ್ತಾರೆ ಅದು ಎಲ್ಲರಿಗೂ ಗೊತ್ತಿದೆ. ಕೇಂದ್ರ ಸರ್ಕಾರದವರು ಟ್ಯಾಕ್ಸ್ ಹಾಕಿದರೆಂದು ಹೇಳುತ್ತಾರೆ. ಆಮದು ಆಗುವಂತಹ ಸಂದರ್ಭಗಳಲ್ಲಿ ಅದು ನೇಪಾಳಕ್ಕೆ ಆಮದು ಆಗುತ್ತದೆಂದು ಹೇಳುವುದು; ಅದು ನೇಪಾಳದಲ್ಲಿ ಏನಾಗುತ್ತದೆಂದರೆ ಅಲ್ಲಿಂದ ಪಶ್ಚಿಮಬಂಗಾಳಕ್ಕೆ ಬಂದಾಗಂ ಶಿಪ್‌ನಿಂದ ಹೊರಬಂದಂತಹ ಮಾಲುಗಳು ನೇರವಾಗಿ ನೇಪಾಳಕ್ಕೆ ಹೋಗದೆ ಉತ್ತರಪ್ರದೇಶಕ್ಕೆ ಹೋಗುತ್ತವೆಂದು ಹೇಳುವಂತಹ ಆರೋಪಗಳು ಇವೆ. ಅದರ ಬಗ್ಗೆ ಕೇಂದ್ರ ಸರ್ಕಾರ ಏನು ಮಾಡಿದೆಯೆಂದು ಮಾನ್ಯ ಮಲ್ಲಿಕಾರ್ಜುನ್‌ರವರು ಪ್ರಸ್ತಾಪ ಮಾಡಿದರು. ಅವರು ಹೇಳುವಂತಹ ರೀತಿಯಲ್ಲಿ ಅಡಿಕೆಯನ್ನು ಡ್ರೈಫ್ರೂಟ್ ಎಂದು ಒಪ್ಪಿಕೊಂಡಿದೆಯೆಂದು ಹೇಳಿದರು. ಆದರೆ ಇತ್ತೀಚಿನ ದಿನಗಳಲ್ಲಿ ಡ್ರೈಫ್ರೂಟ್ ಆಧಾರದಲ್ಲಿ ಅಡಿಕೆ ಬರುತ್ತಿಲ್ಲ. ಅಡಿಕೆ ಡ್ರೈಫ್ರೂಟ್ ಲಿಸ್ಟ್‌ನಲ್ಲಿ ಇಲ್ಲವೆಂದು ಕೇಂದ್ರದ ಕೃಷಿ ಮಂತ್ರಿಗಳಾದ ಮಾನ್ಯ ನಿತೀಶ್‌ಕುಮಾರ್‌ರವರು ಹೇಳಿದರು. ಅಡಿಕೆ ಡ್ರೈಫ್ರೂಟ್ ಲಿಸ್ಟ್‌ನಲ್ಲಿ ಇಲ್ಲವೆಂದು ಅವರು ನೇರವಾಗಿ ಹೇಳಿದರು. ವಿಶೇಷವಾಗಿ ಕೇಂದ್ರ ಸರ್ಕಾರ ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಏನು ಕೆಲಸ ಮಾಡಿದೆ ಅಂದರೆ, ಒಂದು ಅಧ್ಯಯನ ಸಮಿತಿಯನ್ನು ನೇಮಕ ಮಾಡಿದೆ. ಕೋಕೊನಟ್ ಬೋರ್ಡ್ ಛೇರ್ಮನ್‌ರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಲಾಗಿದೆ. ಆ ಸಮಿತಿಯವರು ಮೊನ್ನೆ ಮಂಗಳೂರಿಗೆ ಬಂದು ಸಿಟ್ಟಿಂಗ್ ಮಾಡಿದ್ದಾರೆ. ಆ ರೀತಿಯ ಎಲ್ಲಾ ವ್ಯವಸ್ಥೆಗಳನ್ನು ಕೇಂದ್ರಸರ್ಕಾರ ಕೂಡ ಮಾಡಿದೆ. ರಾಜ್ಯಸರ್ಕಾರ ಮಾತ್ರ ಯಾವುದನ್ನೂ ಮಾಡಲಿಲ್ಲ. ಬಹುಶಃ ನಮ್ಮ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಬೇಸರ ಉಂಟಾಗಿದೆ, ನಾನು ಮೊನ್ನೆ ಟ್ಯಾಕ್ಸ್‌ನ್ನು ತಾತ್ಕಾಲಿಕವಾಗಿ ಸಸ್ಪೆಂಡ್ ಮಾಡಿಯೆಂದು ಹೇಳಿದ್ದೇನೆ; ಮಾಡಲಿಲ್ಲವೆಂದು ಹೇಳುವಂತಹ ನೋವು ಅವರ ಮನಸ್ಸಿನಲ್ಲಿದೆ. ಅದಕ್ಕಾಗಿ ಅವರು ಸ್ವಲ್ಪಮಟ್ಟಿಗೆ ವಿಚಲಿತರಾಗಿ ಕುಳಿತಿರುವುದನ್ನು ನಾನು ನೋಡುತ್ತಿದ್ದೇನೆ. ರೈತರ ಬಗ್ಗೆ ಸ್ಪಂದನ ಮಾಡಬೇಕೆನ್ನುವುದು ಅವರ ಮನಸ್ಸಿನಲ್ಲಿದೆ ಕೋಕಾಕೋಲದವರಿಗೆ 8 ವರ್ಷಗಳದ್ದು ಮನ್ನಾ ಮಾಡಿದ್ದೀರಿ. 260 ಕೋಟಿ ರೂಪಾಯಿಗಳನ್ನು ಅಬಕಾರಿ ಜನರಿಗೆ ಮನ್ನಾ ಮಾಡಿದ್ದೀರಿ. ಇವರಿಗೆ ಮನ್ನಾ ಮಾಡುವುದು ಸರಿಯಲ್ಲ. ತಾತ್ಕಾಲಿಕವಾಗಿ ಸ್ಥಗಿತ ಮಾಡುವುದು ಸರಿಯಲ್ಲವೆಂದು ಹೇಳುವಂತಹದ್ದು ಅವರ ಮಾತಿನಲ್ಲಿದೆ. ನನ್ನ ಹೇಳಿಕೆ ಇಷ್ಟೆ, ತಕ್ಷಣ ಈವೊಂದು ತೆರಿಗೆಗಳನ್ನು ತಾತ್ಕಾಲಿಕವಾಗಿ ಸ್ವಲ್ಪಮಟ್ಟಿಗಾದರೂ ಸ್ಥಗಿತಗೊಳಿಸಿದರೆ ಮಾರ್ಕೆಟ್‌ನಲ್ಲಿ ಏನಾದರೂ ಬದಲಾವಣೆಯಾಗುತ್ತದೆಯೇ ಎನ್ನುವುದನ್ನು ನೋಡಬೆಕು. ರೈತ ತೆಗೆದುಕೊಂಡಿರುವ ಸಾಲಗಳನ್ನು, ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ, ಮಧ್ಯಮಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸದಸ್ಯರು ರೈತರ ಸಮಸ್ಯೆಗಳನ್ನು ಚರ್ಚಿಸುವಂತಹ ಸಂದರ್ಭದಲ್ಲಿ ಪಕ್ಷ ಪ್ರತಿಪಕ್ಷದ ಪ್ರಶ್ನೆ ಬೇಡ. ಅಡಿಕೆ ಬೆಳೆಗಾರರ ಬಗ್ಗೆ ಟ್ಯಾಕ್ಸ್ ರೈಸ್ ಮಾಡುವುದು ಬೇಡವೆನ್ನುತ್ತೀರಿ, ರೇಟ್‌ನಲ್ಲಿ ಬದಲಾವಣೆಯಾದರೆ ಆಗಲಿ. ಕಾರಣವೆನೆಂದರೆ ವಿಶೇಷವಾಗಿ ಅಡಿಕೆ ಬೆಳೆ ಬಗ್ಗೆ ನೀವು ಆಸಕ್ತಿಯಿರತಕ್ಕವರು. ಕ್ಯಾಂಪ್ಕೋ ಎನ್ನತಕ್ಕ ಒಂದು ಸಂಸ್ಥೆ ಇದ್ದರೂ ಏಕೆ

ಪರಿಣಾಮವಾಗಲಿಲ್ಲವೆನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ದಯವಿಟ್ಟು ತಾವು ತಿಳಿದುಕೊಳ್ಳಬೇಕು, ನಿಮಗೆ ಕ್ಯಾಂಪ್ಕೋ ಸಂಸ್ಥೆ ಇರಬೇಕಾದರೆ ಈ ರೀತಿಯಾಗಿ ಅಡಿಕೆಯನ್ನು ಆಮದು ಮಾಡಿಕೊಳ್ಳುವ ಸಂದರ್ಭದಲ್ಲಿ ಒಂದು ಕ್ಯಾನಲಿಂಗ್ ಎಜೆನ್ಸಿ ಮಾಡಿ ಅದನ್ನು ರೆಕಗ್ನೈಸ್ ಮಾಡಿಸಿ ಕೇಂದ್ರಸರ್ಕಾರ ಈ ರೀತಿಯಾಗಿ ಅಥರೈಸ್ಡ್ ಆಗಿ ಮಾಡಿದರೆ ಅಂಡರ್ ಇನ್‌ವಾಯ್ಸ್ ಆಗಿ ಬರುವುದಕ್ಕೆ ಸಾಧ್ಯವಿಲ್ಲ. ಇವತ್ತು ಬೇರೆ ಬೇರೆ ದೇಶದಿಂದ ಏಕೆ ಬರುತ್ತಿದೆ ಅಂದರೆ, ಅಂಡರ್-ಇನ್‌ವಾಯ್ಸ್ ಆಗಿ ಬರುವುದಕ್ಕೆ ಈ ರೀತಿಯಾಗಿ ಕಾರಣವಾಗಿದೆ. ನೀವು ನೂರಕ್ಕೆ ನೂರರಷ್ಟು ಟ್ಯಾಕ್ಸನ್ನು ಜಾಸ್ತಿ ಮಾಡುವುದರ ಜೊತೆಗೆ ಕ್ಯಾಂಪ್ಕೋಗೆ ಎಜೆನ್ಸಿ ಮಾಡಿದರೆ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ : ನಾವು ಈವೊಂದು ಡಿಮಾಂಡನ್ನು ಕೇಂದ್ರಸರ್ಕಾರದ ಮುಂದೆ ಹೇಳಿದ್ದೇವೆ. ಕೇಂದ್ರಸರ್ಕಾರ ದೊಡ್ಡ ಮೊತ್ತವನ್ನು, ನೀವು ಹೇಗೆ ಅವರ್ತ ನಿಧಿ ಮಾಡಿದ್ದೀರಿ ಅದೇ ರೀತಿಯ ಮೊತ್ತವನ್ನು ನಮಗೂ ಕೊಡಬೇಕೆಂದು ಅಮೂಲ್‌ರವರಲ್ಲಿ ಕೇಳುವಂತಹ ಕೆಲಸವನ್ನು ಈಗಾಗಲೇ ಮಾಡಿದ್ದಾರೆ. ಮಾರ್ಕೆಟ್ ವ್ಯವಸ್ಥೆಗೆ ಹೊಸ ಆಯಾಮಗಳನ್ನು ಕೊಡಬೇಕೆಂದು ಕ್ಯಾಂಪ್ಕೋ ತೀರ್ಮಾನ ಮಾಡಿದೆ. ಸಣ್ಣ ಸಣ್ಣ ಪ್ಯಾಕೆಟ್‌ಗಳಲ್ಲಿ ಒಂದು ಕೆ.ಜಿ., ಎರಡು ಕೆ.ಜಿ., ರೀತಿಯಲ್ಲಿ ಮಾಡುವುದು. ಈಗ ಗುಜರಾತಿನಲ್ಲಿ ಭೂಕಂಪದಿಂದ ಕಷ್ಟವಾಗಿದೆ. ಅಲ್ಲಿ ಭೂಕಂಪವಾದ ಕಾರಣ ಅದನ್ನು ಮಾಡುವ ಪರಿಸ್ಥಿತಿಯಲ್ಲಿ ಯಾರೂ ಇಲ್ಲ. ಆದರೂ ಕೂಡ ಈ ಯೋಜನೆಗಳನ್ನು ಹಮ್ಮಿಕೊಳ್ಳುವಂತಹ ಕ್ಯಾಂಪ್ಕೋ ವತಿಯಿಂದ ಆಗುವಂತಹದ್ದನ್ನು ನೋಡಬೇಕು. ಈ ಹಿನ್ನೆಲೆಯಲ್ಲಿ ಅವರು ಸ್ವಲ್ಪ ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕು.

ಶ್ರೀ ಕಾಗೋಡ ತಿಮ್ಮಪ್ಪ : ಕ್ಯಾಂಪ್ಕೋದವರು ಇದನ್ನು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದಾರೆಂದು ಹೇಳಿ ಅದನ್ನು ಮಾಡಿರಿಯೆಂದು ನೀವು ಬರೆಯಿರಿ.

ಶ್ರೀ ಡಿ.ವಿ. ಸದಾನಂದಗೌಡ : ಖಂಡಿತಾ ಮಾಡುತ್ತೇನೆ. ಈ ರೀತಿಯ ಒಂದು ವ್ಯವಸ್ಥೆಗಳು ಆಗಬೇಕು. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಹೆಚ್ಚಿನ ವಿಚಾರಗಳನ್ನು ಬೇರೆಯವರು ಪ್ರಸ್ತಾಪ ಮಾಡಿದ್ದಾರೆ. ಬತ್ತ, ಮೆಕ್ಕೆಜೋಳ ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಒಂದು ಮಾತನ್ನು ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನನ್ನ ಗಮನಕ್ಕೆ ಅದು ಈಗಾಗಲೇ ಬಂದಿದೆ. ಅದು ಎಷ್ಟರಮಟ್ಟಿಗೆ ನಿಜವೋ ಅಥವ ಸುಳ್ಳೋ ನನಗೆ ಗೊತ್ತಿಲ್ಲ. ಕೇರಳದಲ್ಲಿ ಚುನಾವಣೆ ಮುಂದೆ ನಡೆಯುತ್ತಿದೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳನ್ನು ಕೇರಳ ರಾಜ್ಯದ ಉಸ್ತುವಾರಿಗೆ ಹಾಕಿದ್ದಾರೆಂದು ನಾನು ಕೇಳಿದ್ದೇನೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಆ ಜವಾಬ್ದಾರಿಯನ್ನು ಒಪ್ಪಿಕೊಳ್ಳಬಾರದು. ಅದರ ಬದಲಾಗಿ ಇಲ್ಲಿ ರೈತರ ಸಮಸ್ಯೆ ಬಗ್ಗೆ ಡೀಲ್ ಮಾಡಲಿಕ್ಕೆ ಸಾಕಷ್ಟು ಕಾಲಾವಕಾಶ ಬೇಕು. ಚುನಾವಣೆ ಬಂತೆಂದರೆ ಬೇರೆ ಬೇರೆ ರೀತಿಯಲ್ಲಿ ಸೂಟ್‌ಕೇಸುಗಳು ಹೋಗುವ ಸಂದರ್ಭವಾಗಬಹುದು. ಅಂತಹದ್ದು ಆಗಬಾರದು ಎಂದು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಪಕ್ಷದ ವತಿಯಿಂದ ಕೇರಳ ರಾಜ್ಯಕ್ಕೆ ಕಾಸರಗೋಡು ಅಲ್ಲೆಲ್ಲ ಎಷ್ಟು ಜನ ಶಾಸಕರನ್ನು ಹಾಕಿದ್ದಾರೆ?

ಶ್ರೀ ಡಿ.ವಿ. ಸದಾನಂದಗೌಡ : ನಮಗೆ ಆಡಳಿತದ ಜವಾಬ್ದಾರಿಯಿಲ್ಲ. ತಮಗೆ ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕರ್ನಾಟಕ ರಾಜ್ಯದಲ್ಲಿನ ಜನರ ಸಮಸ್ಯೆಗಳನ್ನು ಪರಿಹಾರ ಮಾಡಿ. ಜನ ನಮ್ಮನ್ನು ಅಧಿಕಾರದ ಬೆಂಚ್‌ನಲ್ಲಿ ಕೂರಿಸಿಲ್ಲ. ನೀವು ಏನು ತಪ್ಪು ಮಾಡುತ್ತೀರಿ ಆ ತಪ್ಪನ್ನು ಎತ್ತಿ ತೋರಿಸಲಿಕ್ಕೆ ಜನ ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ; ನಾವು ಆ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ರಾಜ್ಯಾದ್ಯಂತ ರೈತರು ಇಲ್ಲಿಗೆ ಬಂದಾಗ ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಬರೀ ಅಡಿಕೆ ಬಗ್ಗೆ ಮಾತನಾಡುತ್ತೀರಿ. ಬೇರೆ ಬೆಳೆಗಳಾದ ತೊಗರಿ ಈ ರೀತಿ ಬೇರೆ ಬೇರೆ ವಿಚಾರಗಳ ಬಗ್ಗೆ ಕೂಡ ಹೇಳಿ.

ಶ್ರೀ ಡಿ.ವಿ. ಸದಾನಂದಗೌಡ : ನಮ್ಮ ಕರ್ನಾಟಕ ರಾಜ್ಯದ ರೈತರ ಸಮಸ್ಯೆಗಳ ಬಗ್ಗೆ ಗಮನ ಕೊಡಿ. ಊರಿನ ಜನರ ಸಮಸ್ಯೆಯನ್ನು ಬಿಟ್ಟು, ನೆರೆರಾಜ್ಯದ ಅಡಳಿತದ ಸಮಸ್ಯೆ ಬಗ್ಗೆ ಹೋಗುವಂತಹ ಸಂದರ್ಭವಾಗಿದೆ. ಇದು ಆಗಬಾರದೆಂದು ಹೇಳುತ್ತೇನೆ. ರೈತರ ಬಗ್ಗೆ ಈ ಸರ್ಕಾರದಿಂದ ಎರಡು ಕೆಲಸವಾಗಬೇಕು. ರಾಜ್ಯದ ರೈತರ ಕಡೆಯಿಂದ 140 ಕೋಟಿ ರೂಪಾಯಿಗಳ ಬಾಕಿ ಬರಬೇಕೆಂದು ಹೇಳಿ ವಸೂಲಿ ಮಾಡಲಿಕ್ಕೆ ಶುರು ಮಾಡಿದ್ದೀರಿ. ಅವರ ಪಂಪ್‌ಸೆಟ್‌ಗಳಿಗೆ ಒದಗಿಸಿರತಕ್ಕ ಕರೆಂಟನ್ನು ಮಾಸ್ ಆಡಿ ಡಿಸ್‌ಕನೆಕ್ಟ್ ಮಾಡಲಿಕ್ಕೆ ಶುರು ಮಾಡಿದ್ದೀರಿ. ಈಗ ರೈತರ ಪರಿಸ್ಥಿತಿ ಏನಾಗಿದೆ ಅಂದರೆ, ರೈತ ಪಂಪ್‌ಸೆಟ್‌ನ ಮನೆಯಲ್ಲೇ ಮಲಗುತ್ತಾನೆ. ಮನೆಯಿಂದ ಹೆಂಡತಿ ಊಟ ತಂದು ಕೊಡುತ್ತಾಳೆ. ಯಾವಾಗ ಕರೆಂಟ್ ಬರುತ್ತದೋ ಗೊತ್ತಿಲ್ಲ. ಅಲ್ಲೇ ಪಕ್ಕದ ಕೆರೆಯಲ್ಲಿ ಸ್ನಾನ ಮಾಡುವ ಪರಿಸ್ಥಿತಿ ಬಂದಿದೆ ಅದನ್ನು ನಿಲ್ಲಿಸಬೇಕಾದರೆ ಮಾಸ್ ಡಿಸ್‌ಕನೆಕ್ಟ್‌ನ್ನು ನಿಲ್ಲಿಸಬೇಕು. ಕನಿಷ್ಟ ದಿನಕ್ಕೆ 8 ಗಂಟೆ, 10ಗಂಟೆ ಕಾಲ ವಿದ್ಯುತ್ ಒದಗಿಸುವಂತಹ ಕೆಲಸವನ್ನು ಮಾಡಬೇಕು. ಅಡಿಕೆ ಗಿಡಗಳು ಸತ್ತುಹೋದರೆ ಏಳೆಂಟು ವರ್ಷ ಏನೂ ಮಾಡುವಹಾಗೆ ಇಲ್ಲ. ಪವರ್ ಸರಿಯಾಗಿ ಕೊಡಬೇಕು. ಈಗಲೂ ಕಾಲ ಮಿಂಚಿಲ್ಲ, ನೀವು ಸರಿಯಾಗಿ ಕೆಲಸ ಮಾಡಬೇಕು. ಜನರು ನಿಮ್ಮನ್ನು ಹೊರಗೆ ಹೋಗಲಿಕ್ಕೆ ಬಿಡುವುದಿಲ್ಲ. ರೆಡ್‌ಲೈಟ್ ಕಾರುಗಳನ್ನು ಮಾರ್ಗದಲ್ಲಿ ಹೋಗಲಿಕ್ಕೆ ಬಿಡುವುದಿಲ್ಲ. ಜನರು ಮತ್ತು ರೈತರು ಅದಕ್ಕೆ ಈಗಾಗಲೇ ತಯಾರಾಗಿದ್ದಾರೆ. ಕರೆಂಟ್ ಮುಟ್ಟಿದರೆ ಶಾಕ್ ಹೊಡೆಯುವುದಿಲ್ಲ. ರೈತರನ್ನು ಮುಟ್ಟಿದರೆ ನಿಮಗೆ ಶಾಕ್ ಜಾಸ್ತಿಯಾಗುತ್ತದೆ. ದಯಮಾಡಿ ಇದನ್ನು ಅರಿತುಕೊಂಡು ಜವಾಬ್ದಾರಿಯಿಂದ ರೈತರ ಸಮಸ್ಯೆಗಳಿಗೆ ಸ್ಪಂದನ ಮಾಡಬೇಕು. ಈ ಬಗ್ಗೆ ಕೂಲಂಕುಷವಾದ ಉತ್ತರಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ: ಮಂತ್ರಿಗಳು ಕೆಂಪುಲೈಟ್ ಕಾರುಗಳನ್ನು ಮಾರ್ಗದಲ್ಲಿ ಬಿಡುವುದಿಲ್ಲ. ಆದರೆ ನಿಮ್ಮ ವಿರೋಧಪಕ್ಷದ ನಾಯಕರಾದ ಜಗದೀಶ್‌ಶೆಟ್ಟರ್‌ರವರ ಕೆಂಪುಲೈಟ್ ಕಾರು ಹೋಗುತ್ತದೆ, ಆಗ ಏನು ಮಾಡುತ್ತಾರೆ?

ಶ್ರೀ ಡಿ.ವಿ. ಸದಾನಂದಗೌಡ : ಜನರು ನಮ್ಮನ್ನು ಎಲ್ಲಾ ಕಡೆ ಬನ್ನಿ ಬನ್ನಿಯೆಂದು ಸ್ವಾಗತ ಮಾಡುತ್ತಾರೆ. ಈ ಸರ್ಕಾರದವರಿಗೆ ಕಿವಿ, ಕಣ್ಣು, ಮೂಗು ಏನೂ ಇಲ್ಲ. ನಿದ್ರೆ ಮಾಡುವವರನ್ನು ಎಚ್ಚರಿಸಬಹುದು. ನಿಮ್ಮ ಸರ್ಕಾರ ಹೇಗಿದೆ ಅಂದರೆ ನಿದ್ರೆ ಮಾಡುವ ಹಾಗೆ ನಟನೆ ಮಾಡುತ್ತಿದೆ. ನಿದ್ರೆ ಮಾಡಿದರೆ ನಿಮ್ಮನ್ನು ಎಬ್ಬಿಸಬಹುದು. ಆವರೆ ನಿದ್ರೆ ಮಾಡಿದ ಹಾಗೆ ನಟನೆ ಮಾಡುತ್ತಿದ್ದೀರಿ. ನಿಮಗೆ ಎಷ್ಟೇ ನೀರು ಹಾಗಿದ್ದರೂ ಏಳುವುದಿಲ್ಲ, ನಿಮ್ಮ ಪರಿಸ್ಥಿತಿ ಆ ರೀತಿಯಾಗಿದೆ. ಇಷ್ಟು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಉಪಾಧ್ಯಕ್ಷರೆ, ರಾಜ್ಯದ ವಿವಿಧ ಭಾಗಗಳಲ್ಲಿ ರೈತ ಬೆಳೆದಂತಹ ಬೆಳೆಗಳ ಬೆಲೆ ಕುಸಿತದಿಂದಾಗಿ ಸಾಕಷ್ಟು ಹಾನಿಯಾಗಿರುವ ಬಗ್ಗೆ ಚರ್ಚೆ ದೀರ್ಘವಾಗಿ ಪ್ರಾರಂಭವಾಗಿದೆಯೆಂದು ಭಾವಿಸಬಹುದು. ನಾನು ವಿಶೇಷವಾಗಿ ಗೋವಿನಜೋಳದ ಬಗ್ಗೆ ಚರ್ಚೆ

ಮಾಡುವುದಕ್ಕೆ, ನನ್ನ ವಿಚಾರವನ್ನು ಸಭೆಯ ಮುಂದಿಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಇವತ್ತು ರಾಜ್ಯದಲ್ಲಿ ಸುಮಾರು 18 ಲಕ್ಷ ಚೀಲಕ್ಕಿಂತ ಹೆಚ್ಚು ಪದಾರ್ಥಗಳನ್ನು ವಿವಿಧ ಎಜೆನ್ಸಿಗಳ ಮೂಲಕ ಖರೀದಿ ಮಾಡಲಾಗಿದೆಯೆಂದು ಮಾಹಿತಿಯನ್ನು ಕೊಡಲಾಗಿದೆ. ಅದು ಇನ್ನೂ ಜಾಸ್ತಿಯಾಗಿದೆ. ಅದೂ ಅಲ್ಲದೆ ಇನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆ ಬರಬಹುದೆಂದು ಅಂದಾಜು ಇದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಅತೀ ಹೆಚ್ಚಿನ ಅಂದರೆ ಹಿಂದೆ ಬೆಳೆಯುವಂಥ ಪ್ರದೇಶ ಏನಿತ್ತು ಆ ಪ್ರದೇಶದ ದೃಷ್ಟಿಯಿಂದ ಮತ್ತು ಪ್ರಮಾಣದ ದೃಷ್ಟಿಯಿಂದ, ಇದು ಆಲ್‌ಟೈಮ್ ರೆಕಾರ್ಡ್ ಎಂದು ಹೇಳಿದರೂ ಸರಿ; ಅಷ್ಟು ಪ್ರಮಾಣದಲ್ಲಿ ಇದನ್ನು ಬೆಳೆಯಲಾಗಿದೆ. ಮತ್ತೆ ಇದು ಇಲ್ಲೇ ಬೆಳೆಯಬೇಕು ಎನ್ನುವಂಥ ಸನ್ನಿವೇಶ ಇವತ್ತು ಇಲ್ಲ. ನಾನು ನೋಡಿದಹಾಗೆ ಮತ್ತು ವೈಯುಕ್ತಿಕವಾಗಿ ತಿಳಿದುಕೊಂಡಿರುವ ಹಾಗೆ ಪಿರಿಯಾಪಟ್ಟಣದಿಂದ ಹಿಡಿದು ಬಹುತೇಕ ಬೆಳಗಾಂ, ಬೀದರ್ ಮುಂತಾಗಿ ರಾಜ್ಯದ ಎಲ್ಲ ಕಡೆ ಹಿಂದಿನ ವಾಣಿಜ್ಯ ಬೆಳೆಗಳು, ಅದರಲ್ಲೂ ವಿಶೇಷವಾಗಿ ಹತ್ತಿ ಇರಬಹುದು, ಬೇರೆ ಪದಾರ್ಥಗಳು ಇರಬಹುದು, ಆ ಬೆಳೆಗಳನ್ನು ಇವತ್ತು ಬಿಟ್ಟು ರೈತರೆಲ್ಲ ಇದಕ್ಕೆ ಹೋಗುವಂಥ ಪರಿಸ್ಥಿತಿ ಬಂದಿದೆ. ಇದೊಂದು ಸೈಕಲ್. ಆ ಸೈಕಲ್‌ನ ಕೊನೆಯ ಹಂತಕ್ಕೆ ಇವತ್ತು ಹೋಗಿಬಿಟ್ಟಿದ್ದಾರೆ. ಇವತ್ತು ಹೀಗಾಗಿ ಬಹಳ ದೊಡ್ಡ ಪ್ರದೇಶದಲ್ಲಿ ಹೆಚ್ಚು ಎನ್ನುವಷ್ಟು ಉತ್ಪಾದನೆಯಾಗಿದೆ. ಇವತ್ತು ನಮ್ಮ ಪ್ರದೇಶದಲ್ಲಿ ಹತ್ತಿ ಬೆಳೆಯಲಾರದೆ ಸುಮಾರು ಹತ್ತು ವರ್ಷಗಳ ಕಾಲ ಆಗಿಹೋಗಿದೆ. ಆನಂತರ ಮಲೆನಾಡಿನಲ್ಲಿ ಬೆಳೆಯುತ್ತಿದ್ದರು, ಬೇರೆಬೇರೆ ಹೊಸ ಪ್ರದೇಶಗಳಲ್ಲಿ ಬೆಳೆಯುತ್ತಿದ್ದರು. ಬೆಳೆ ಕೂಡ ಚೆನ್ನಾಗಿಯೇ ಬರುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಅದು ಅಷ್ಟು ಚೆನ್ನಾಗಿ ಇಳುವರಿ ಬರುತ್ತಿಲ್ಲ, ಕಾಯಿಗಳು ಹಿಡಿಯುವುದಿಲ್ಲ, ರೋಗ ಜಾಸ್ತಿ ಬರುತ್ತಿದೆ. ಮತ್ತು ಖರ್ಚು ಜಾಸ್ತಿ ಬರುತ್ತಿದೆ. ಹತ್ತಾರು ಕ್ವಿಂಟಾಲ್‌ಗೆ ಬರಬೇಕಾಗಿದ್ದ ಬೆಳೆ ಇವತ್ತು ಹತ್ತಾರು ಕೆ.ಜಿ.ಗೆ ಇಳಿದು, ಹಾಕಿದ ಹಣಕೂಡ ಬರಲಾರದಂಥ ಪರಿಸ್ಥಿತಿ ಇದೆ. ಅದಕ್ಕಾಗಿ ಮಾಡಿದಂಥ ಸಾಲಗಳನ್ನು ಕೂಡ ತೀರಿಸಲಿಕ್ಕೆ ಸಾಧ್ಯವಾಗಿಲ್ಲ. ಬಹುತೇಕ ಬ್ಯಾಂಕಿನ ಸಾಲಗಳು ಆಯಿತು ಸಹಕಾರ ಸಂಘಗಳ ಸಾಲಗಳು ಆಯಿತು ದಲ್ಲಾಳಿಗಳ ಹತ್ತಿರ ತರುವಂಥ ಸಾಲಗಳು ಆಯಿತು, ಮನೆಗಳಲ್ಲಿದ್ದ ಒಡವೆ ಇಂಥವುಗಳನ್ನು ಕೂಡ ಒತ್ತೆ ಇಟ್ಟು ಮಾರಾಟ ಮಾಡಿ ಬಹುತೇಕ ತಮ್ಮಲ್ಲಿರುವಂಥ ಬಂಡವಾಳ ಎಲ್ಲವನ್ನು ಇವತ್ತು ರೈತರು ಕಳೆದುಕೊಂಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇದಕ್ಕೆ ಪರ್ಯಾಯವಾಗಿ ಸ್ವಲ್ಪಮಟ್ಟಿಗೆ ಕಡಿಮೆ ಖರ್ಚು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ, ಮತ್ತು ರೋಗದ ನೋವು ಕೂಡ ಕಡಿಮೆಯಾಗಿದೆ. ಹಾಗೆಯೇ ಬಹಳ ಕಡಿಮೆ ಅವಧಿಯಲ್ಲಿ ಕೃಷಿ ಮಾಡುವಾಗ ಕೆಲಸಗಳಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಅದನ್ನು ತಡೆದುಕೊಂಡು, ಮಳೆಗಾಲದಲ್ಲಿ ಮಾಡುವುದರಿಂದ ನೀರು ಸಹಿತ ಹೊಂದಿ ಅಪ್ಪೋ ಇಪ್ಪೋ ಬರುವ ಬೆಳೆಗೆ ಶರಣುಗೋಗುವಂಥ ಪರಿಸ್ಥಿತಿ ರೈತರಿಗೆ ಬಂದು, ಇತ್ತೀಚೆಗೆ ಅಂತೂ ಮೂರು-ನಾಲ್ಕು ವರ್ಷಗಳಲ್ಲಿ ಅದು ಬೆಳೆಯುತ್ತ ಬೆಳೆಯುತ್ತ ಬಂದು ಕೊನೆಗೆ, ನನ್ನ ಭಾಗದಲ್ಲಿ ಹೇಳುತ್ತೇನೆ; ಬಹುತೇಕ ತೊಂಬತ್ತೊಂಬತ್ತು ಪಾಲಿಗಿಂತ ಹೆಚ್ಚಿನ ಗೋವಿನಜೋಳದ ಬೆಳೆಗಳನ್ನು ಇವತ್ತು ನಾವು ಕಾಣುತ್ತಿದ್ದೇವೆ. ಅದಕ್ಕೆ ಇನ್ನೂ ಒಂದು ಕಾರಣ ಇತ್ತು. ಇವತ್ತು ಸ್ವಲ್ಪಮಟ್ಟಿಗೆ ಬೆಲೆ ಜಾಸ್ತಿ ಇದೆ. ಅದು ಹಿಂದೆ ಇರಲಿಲ್ಲ. ಎರಡುನೂರು-ಮುನ್ನೂರು ಮಾರುವಂಥ ಬೆಳೆ ಐದುನೂರು- ಕೆಲವು ಸಂದರ್ಭದಲ್ಲಿ ಐದೂವರೆನೂರು ವರೆಗೆ ಬಂದು, ಸ್ವಲ್ಪ ಆಕರ್ಷಕವಾಗಿ ಕಂಡುಬಂದಿದೆ. ಹಿಂಗಾರಿ

ಸಂಪೂರ್ಣ ಬೆಳೆ ಬೆಳೆದು ಇವತ್ತು ನಿಂತಿರುವಂಥ ಸನ್ನಿವೇಶ ಇದೆ. ಆದರೆ ಮಾರುಕಟ್ಟೆಯಲ್ಲಿ ಇದರ ಬೆಲೆ ಮಾತ್ರ ಬಹಳ ಕುಸಿದಿದೆ. ಬಹುತೇಕ ಅದಕ್ಕೆ ಖರ್ಚು ಮಾಡಿದಂಥ ಹಣ ಸಹಿತ ವಾಪಸ್ಸು ಬರುವಂಥ ಸಾಧ್ಯತೆ ಇಲ್ಲ. ಮುನ್ನೂರರಿಂದ ಮುನ್ನೂರೈವತ್ತು ರೂಪಾಯಿ ಇದೆ. ಇವತ್ತು ಭಾರತೀಯ ಆಹಾರ ನಿಗಮದವರು ಆಗಿರಬಹುದು, ಕರ್ನಾಟಕ ನಾಗರೀಕ ಆಹಾರ ಪೂರೈಕೆ ನಿಗಮದವರು ಆಗಿರಬಹುದು, ಯಾರೇ ಇರಬಹುದು ಅವರ ಖರೀದಿ ಮಾಡಿದಂಥ ಸಂದರ್ಭದಲ್ಲಿ, ನಾಲ್ಕುನೂರುಐವತ್ತು ರೂಪಾಯಿಗೆ ಖರೀದಿ ಮಾಡುವಂಥ ಸನ್ನಿವೇಶದಲ್ಲಿಯೂ ಸಹಿತ, ಮಾರುಕಟ್ಟೆಗೆ ರೈತ ತೆಗೆದುಕೊಂಡುಹೋದರೆ ಮುನ್ನೂರಮೂವತ್ತಕ್ಕಿಂತ ಜಾಸ್ತಿ ಬರಲಿಲ್ಲ. ಅದು ಮುನ್ನೂರಐವತ್ತರವರೆಗೆ ಹೋಗಿತ್ತು. ಅದೇ ಕೊನೆಯದಾದರೆ, ಮತ್ತು ಈ ರೀತಿಯ ಸರ್ಕಾರದ ವ್ಯವಸ್ಥೆ ಇಲ್ಲದೇ ಇದ್ದರೆ ಬಹುತೇಕ ಎರಡನೂರು ರೂಪಾಯಿಗೂ ಕಡಿಮೆ ಬರುತ್ತಿತ್ತು ಎಂದು ನಾನು ಭಾವಿಸುತ್ತೇನೆ. ಈಗಲೂ ಸರಾಸರಿ ಇಳುವರಿ 15 ಕ್ವಿಂಟಾಲ್‌ನಿಂದ 20 ಕ್ವಿಂಟಾಲ್ ಆಗಬಹುದು. ಇದಕ್ಕೆ ಮುನ್ನೂರು-ಮುನ್ನೂರೈವತ್ತು ರೂಪಾಯಿಗೆ ಮಾರಾಟ ಮಾಡುವಂಥಾದರೆ, ಇದನ್ನು ಮಾಡಿದಂಥ ಖರ್ಚಿಗೆ ಹೋಲಿಸಿದರೆ ಇವತ್ತು ಖರ್ಚು ಸಹಿತ ಮೈಮೇಲೆ ಬರುವಂಥ ಸನ್ನಿವೇಶ ನಿರ್ಮಾಣವಾಗಿದೆ. ಇಂತಹ ಸನ್ನಿವೇಶದಲ್ಲಿ ರೈತನಿಗೆ ಇದೇನು ನಾಲ್ಕುನೂರ ನಲ್ವತ್ತೈದು ರೂಪಾಯಿಗೆ ಮಾರ್ಕೆಟ್ ಇಂಟ್ರೊಡಕ್ಷನ್ ಸ್ಕೀಮ್ ಇದೆ ಇದು ರೈತರಿಗೆ ಬಹಳ ಅಪ್ಯಾಯಮಾನವಾಗಿ ಕಾಣಿಸಿದೆ. ಇದರಿಂದ ಬರುವ ನೂರೈವತ್ತು ರೂಪಾಯಿ ವ್ಯತ್ಯಾಸ ಏನಿದೆ, ಅದರಲ್ಲಿ ಆತ ಭಾವಿಸಿದ್ದ; ಈ ಹಣದಿಂದ ಕೃಷಿಗಾರಿ ಆತ ತೆಗೆದುಕೊಂಡಿದ್ದಂಥ ಸಾಲವನ್ನು ವಾಪಸ್ಸು ಮಾಡಬಹುದು ಎಂದು ಆತ ನಿರೀಕ್ಷಿಸಿದ್ದ. ಇವತ್ತು ಅದುಬಿಟ್ಟರೆ ಬೇರೆ ದಾರಿಯೇ ಇರಲಾರದಂಥ ಪರಿಸ್ಥಿತಿ ಇತ್ತು. ಇವತ್ತು ರಾಜ್ಯದಲ್ಲಿ ಅದೊಂದೇ ಕಾರಣಕ್ಕಾಗಿ ಎಂದು ನಾನು ಹೇಳುವುದಿಲ್ಲ. ದೇಶದಲ್ಲಿ, ರಾಜ್ಯದಲ್ಲಿರುವ ಅನೇಕ ಕಾರಣಗಳು ಇರಬಹುದು. ಪ್ರತಿ ಪದಾರ್ಥದ ಬೆಲೆಯನ್ನು ತೆಗೆದುಕೊಂಡರೂ ಸಹಿತ, ಅದರ ಹುಟ್ಟುವಳಿ ಬೆಲೆಯ ಪ್ರಮಾಣ ಕಡಿಮೆ ಇದ್ದುದನ್ನು ನೋಡಿ, ಯಾವುದಾದರೂ ಒಂದು ರೀತಿಯಿಂದ ಇದನ್ನು ಸುಧಾರಿಸಬೇಕು, ಎಂದು ಸರ್ಕಾರ ತಿರ್ಮಾನಿಸಿತು ಏಕೆಂದರೆ ರೈತ ಇವತ್ತು ಬಹಳ ಕಷ್ಟಕ್ಕೆ ಒಳಗಾಗಿದ್ದಾನೆ. ಇವತ್ತು ಅವನು ಖರೀದಿ ಮಾಡುವಂಥ ಕೇಂದ್ರಕ್ಕೆ ಹೋಗಿ ಎದುರುಗಡೆ ತಿಂಗಳುಗಟ್ಟಲೆ ಕುಳಿತು ತನ್ನ ಬೆಳೆಯನ್ನು ಖರೀದಿಮಾಡಿ ಎದು ಕೇಳುವಂಥ ಪರಿಸ್ಥಿತಿ ನಿರ್ಮಾಣವಾಗಿಬಿಟ್ಟಿದೆ. ಅಧ್ಯಕ್ಷರೇ, ನಾನು ನನ್ನ ಕ್ಷೇತ್ರದಲ್ಲೇ ನೋಡಿದ್ದೇನೆ. ನರಗುಂದದಲ್ಲಿ ಸುಮಾರು ಒಂದು ತಿಂಗಳಿಂದ, ಇಪ್ಪತ್ತು-ಇಪ್ಪತ್ತೈದು ದಿವಸಗಳಿಗಿಂತಲೂ ಜಾಸ್ತಿ ಕಾಲದಿಂದ ಸುಮಾರು ಒಂದು ಲಕ್ಷ ಚೀಲಗಳನ್ನು ಒಟ್ಟುಮಾಡಿಕೊಂಡು ಸಾವಿರಾರು ಜನ ರೈತರು ಎ.ಪಿ.ಎಂ.ಸಿ. ಯಾರ್ಡಿನಲ್ಲಿ ನಿಂತಿದ್ದಾರೆ. ಆದರೆ ಇದು ರಾಜ್ಯ ಸರ್ಕಾರದ ಜವಾಬ್ದಾರಿ. ಇದು ಬರೇ ಆರ್ಥಿಕವಾದ ಒಂದೇ ತೊಂದರೆಯಲ್ಲ. ಒಂದು ರೀತಿಯಿಂದ ಇದರಿಂದಾಗಿ ಕಾನೂನು ಸುವ್ಯವಸ್ಥೆಗೆ ತೊಂದರೆಯಾಗುತ್ತದೆ. ರೈತರಿಗೆ ತೊಂದರೆಯಾಗುತ್ತದೆ. ಅವರು ಬಹಳ ಕಷ್ಟಪಟ್ಟಿರತಕ್ಕಂಥ ಜನರಾಗಿರುವಾಗ ಏನಾದರೂ ಮಾಡಿ ಇದನ್ನು ಬಗೆಹರಿಸಲು ಇಷ್ಟಾದರೂ ನಾವು ಸಹಾಯ ಮಾಡೋಣವೆಂದು ಸರ್ಕಾರದವರು ಮಾಡುವುದಕ್ಕೆ ಹೋದರು. ಅಧ್ಯಕ್ಷರೇ, ತಮಗೆ ಗೊತ್ತಿದೆ, ಇವತ್ತು ರಾಜ್ಯದಲ್ಲಿ ಭಾರತೀಯ ಆಹಾರ ನಿಗಸದವರು ತೆಗೆದುಕೊಳ್ಳುತ್ತಿದ್ದಾರೆ, ಇಲ್ಲವೆಂದು ನಾನು

ಹೇಳುವುದಿಲ್ಲ. ಅದರೆ ಅವರ ಧೋರಣೆ, ಪದ್ಧತಿ ಯಾವರೀತಿ ಇದೆಯೆಂದು ಹೇಳಿದರೆ ಇವತ್ತು ಒಂದು ಕೇಂದ್ರವನ್ನು ತೆಗೆಯಬೇಕು ಎಂದರೆ, ಸುಮಾರು ಮೂರು ತಿಂಗಳಿಂದ ಇದು ನಡೆಯುತ್ತಿದೆ. ಈ ಕಡೆ ಕೊಪ್ಪಳದಲ್ಲಿ, ಶಿವಮೊಗ್ಗದಲ್ಲಿ ಪ್ರಾರಂಭವಾಯಿತು. ಇದು ತಮ್ಮ ಭಾಗದಲ್ಲೂ ಇದೆ. ಹಾವೇರಿಯಲ್ಲಿದೆ, ಧಾರವಾಡದಲ್ಲಿದೆ, ಬೆಳಗಾವ್‌ನಲ್ಲಿದೆ; ಬಿಜಾಪುರದಲ್ಲಿದೆ, ಬಾಗಲಕೋಟೆಯಲ್ಲಿದೆ. ಇಲ್ಲಿ ಪಿರಿಯಾಪಟ್ಟಣದಲ್ಲಿ ಬಹಳ ಬೇಗ ಎಂದರೆ ನವೆಂಬರ್ ತಿಂಗಳಲ್ಲಿ ಬಂದರೆ ನಮ್ಮ ಭಾಗದಲ್ಲಿ ಸುಮಾರು ಡಿಸೆಂಬರ್, ಜನವರಿ ತಿಂಗಳವರೆಗೆ ಆ ಬೆಳೆ ಬರುತ್ತದೆ. ಬೆಳೆಬಂದಾಗ ಕೂಡಲೇ ಯಾರೂ ಹೋಗಿ ಹಾರ್ವೆಸ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಅದೆಲ್ಲ ಒಂದೆಡೆ ಗುಪ್ಪೆ ಹಾಕಿ, ಆ ಇರುವ ಜಮೀನಿನಲ್ಲಿ ಬೇರೆ ಯಾವುದಾದರೂ ಹಿಂಗಾರು ಬೆಳೆಗಳನ್ನು ಕಡಲೆ ಇರಬಹುದು, ಗೋಧಿ ಇರಬಹುದು, ಇಂತಹ ಬೆಳೆಗಳನ್ನು ಬೆಳೆಯಲು ಮುಂದಾಗುತ್ತಾರೆ. ಇಂತಹ ಬೆಳೆಗಳನ್ನು ಹಾಕಿ ನೀರು ಕೊಡಿಸುವ ಕೆಲಸಕ್ಕೆ ಅವರುಗಳು ಇಳಿಯುತ್ತಾರೆ. ಇದು ಸುಮಾರು ಎರಡು ತಿಂಗಳು ನಡೆಯುವುದರಿಂದ, ಯಾರೂ ಅದರ ಕಡೆ ಲಕ್ಷ್ಯ ಹಾಕುವುದಿಲ್ಲ. ಹೀಗಾಗಿ ನವೆಂಬರ್ ತಿಂಗಳಲ್ಲಿ ಪ್ರಾರಂಭವಾದ ಈ ಗೋವಿನಜೋಳದ ಒಕ್ಕಣೆ ಕೆಲಸ, ನಮ್ಮ ಕಡೆಗೆ ಬರುವಾಗ ಜನವರಿ, ಫೆಬ್ರವರಿನಿಂದ ಮೇ ವರೆಗೆ ನಡೆಯುತ್ತದೆ. ಅಲ್ಲಿಯವರೆಗೆ ತೆನೆ ರೂಪದಲ್ಲಿ ಅದು ಹಾಗೆಯೇ ಬಿದ್ದಿರುತ್ತದೆ. ಈ ಕಾರಣದಿಂದಾಗಿ ಇದು ವಿಳಂಬವಾಗುತ್ತದೆ ಮತ್ತು ನಂತರ ಅದನ್ನು ಭಾರತೀಯ ಆಹಾರ ನಿಗಮಕ್ಕೆ ಕೊಡಬೇಕಾಗುತ್ತದೆ. ಇವತ್ತು ಆಹಾರ ನಿಗಮದವರು ಕೇಂದ್ರಗಳನ್ನು ಪ್ರಾರಂಭ ಮಾಡಿದ್ದಾರೆ. ಅವರು ಆ ಕೇಂದ್ರಗಳಿಗೆ ಗ್ರೇಡರ್ಸ್ ಎಂದು ಹಾಕುತ್ತಾರೆ. ಆ ಗ್ರೇಡರ್ಸ್‌ಗಳು ಬರಬೇಕು. ಅದನ್ನು ತೆಗೆದುಕೊಂಡು ಬರುವವರು ಪರರಾಜ್ಯದವರು, ಅವರಿಗೆ ಇಲ್ಲಿಯ ಭಾಷೆ ಬರುವುದಿಲ್ಲ. ಅವರು ಬೆಳಿಗ್ಗೆ 12 ಗಂಟೆಗೆ ಬರುತ್ತಾರೆ ಮತ್ತು ನಾಲ್ಕು ಗಂಟೆಗೆ ಹೊರಟುಬಿಡುತ್ತಾರೆ. ನೂರು ಇನ್ನೂರು ಚೀಲಗಳನ್ನು ಮಾತ್ರ ತೆಗೆದುಕೊಂಡು ಅದರಲ್ಲಿ ಪ್ರತಿಯೊಂದರಲ್ಲಿ ಸ್ಯಾಂಪಲ್ಸ್ ತೆಗೆದು ತೇವಾಂಶ ಇಷ್ಟು ಇರಬೇಕು, ಇದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕಸ ಇರಬೇಕೆ ಎಂದು ಹೇಳುವ ನೀತಿಯಿಂದಾಗಿ, ಅದರಲ್ಲೂ ಅವರು ಬಹಳ ನಿಧಾನವಾಗಿ ಈ ಕೆಲಸ ಮಾಡುವಂಥ ಸನ್ನಿವೇಶ ಇದೆ. ಮತ್ತೆ ಎಂಟು ದಿವಸ ಅವರು ಇದ್ದರೆ, ಒಂಬತ್ತನೇ ದಿವಸಕ್ಕೆ ಅವರ ವರ್ಗಾವಣೆಯಾಗುತ್ತದೆ. ಬೇರೆ ಕಡೆ ಕೇಂದ್ರಗಳನ್ನು ತೆಗೆಯಿರಿ ಎಂದರೆ ತೆಗೆಯುವುದಕ್ಕೆ ಸಾಧ್ಯವಿಲ್ಲ. ಅವರು ಇಲ್ಲದಿರುವಾಗ ಏನಾದರೂ ಮಾಲುಗಳನ್ನು ತೆಗೆದುಕೊಂಡು ಹೋದರೆ ಅವರು ತೆಗೆದುಕೊಳ್ಳುವುದಿಲ್ಲ. ಇಂತಹ ಎಲ್ಲ ಅಸಹಕಾರ, ಅನಾನುಕೂಲತೆಗಳಿಂದಾಗಿ, ರಾಜ್ಯದಲ್ಲಿ ಸಾಕಷ್ಟು ಒತ್ತಾಯಗಳಾಗಿವೆ. ಅದಕ್ಕಾಗಿ ಒಬ್ಬ ಹಿರಿಯ ಐ.ಎ.ಎಸ್. ಅಧಿಕಾರಿ ಮತ್ತು ಕೆಳದರ್ಜೆಯ ಅಧಿಕಾರಿಗಳು ಕೂಡ ಸಸ್ಪೆಂಡ್ ಆಗುವಂಥ ಸನ್ನಿವೇಶ ಇವತ್ತು ಬಂದಿದೆ. ಭಾರತೀಯ ಆಹಾರ ನಿಗಮದವರ ಅಸಹಕಾರ ಎಷ್ಟರಮಟ್ಟಿಗೆ ಇದೆಯೆಂದು ಹೇಳಿದರೆ ಜಿಲ್ಲಾಧಿಕಾರಿಗಳು ಸಾಷ್ಟಾಂಗ ನಮಸ್ಕಾರ ಮಾಡುವುದು ಬಿಟ್ಟು ಎಲ್ಲ ಸೌಲಭ್ಯಗಳನ್ನು ಒದಗಿಸಿ, ಜೀಪು ಒದಗಿಸಿ, ಬಾಕಿ ಎಲ್ಲ ವ್ಯವಸ್ಥೆಗಳನ್ನು ಮಾಡಿ ನೇರವಾಗಿ ಕೇಳಿದರೂ ಕೂಡ ಸಹಕಾರ ಮಾಡುವುದಕ್ಕೆ ಅವರು ತಯಾರಿಲ್ಲ. ಹಿಗಾಗಿ ಏನೇ ಮಾಡಿದರೂ ಕೂಡ ಅದು ಹಾಗೆಯೇ ಇದೆ. ಮಾನ್ಯ ವಿರೋಧಪಕ್ಷದ ನಾಯಕರು ಬಹಳಷ್ಟು ಅವ್ಯವಹಾರಗಳು ನಡೆಯುತ್ತಿವೆ ಎಂದ ಹೇಳಿದರು. ಹೌದು, ಅದು ನನ್ನ ಕ್ಷೇತ್ರದಲ್ಲೇ

ನಡೆದಿದೆ. ನಾವು ಹಿಡಿದು ಕೊಟ್ಟಿವು ಎರಡು ಸಾವಿರ ಚೀಲ ಗೋವಿನ ಜೋಳ ರಾತ್ರೋರಾತ್ರಿ ಬರುತ್ತಿತ್ತು. ಇದು ಪ್ರತಿ ದಿವಸ 4 ದಿವಸದವರೆಗೆ ಬರುತ್ತಿತ್ತು. ಇದು ಎಲ್ಲಿಂದ ಬರುತ್ತದೆ ಎಂದು ಹೇಳಿದರೆ, ಎಲ್ಲೋ ದೂರದಿಂದ ಪಕ್ಕದ ತಾಲ್ಲೂಕಿನಿಂದಲೋ, ಪಕ್ಕದ ಹಳ್ಳಿಗಳಿಂದಲೋ ತೆಗೆದುಕೊಂಡು ಬಂದಿದ್ದಕ್ಕೆ ಯಾವುದೇ ಸ್ಲಿಪ್ ಇಲ್ಲ, ಟ್ರಕ್ ಸ್ಲಿಪ್ ಎಂದು ಕೊಡುತ್ತಾರೆ, ಅದೂ ಇಲ್ಲ. ಟಿಪ್ಪಿಂಗ್ ಬಗ್ಗೆ ಇಲ್ಲ. ಯಾರ ಹೆಸರು ಎಂದೂ ಇಲ್ಲ, ಏನೂ ಇಲ್ಲ. ಆ ಡ್ರೈವರನ್ನು ಕೇಳಿದರೆ, ಇಂತಹವರ ಮಾಲು, ಯಾರೋ ಒಬ್ಬರು ದೊಡ್ಡ ವ್ಯಾಪಾರಸ್ಥರ ಮಾಲು ಎಂದು ಹೇಳುವಂಥ ಸನ್ನಿವೇಶ ಬಂತು. ಅವರನ್ನು ಹಿಡಿದುಕೊಂಡು ಹೋಗಿ, ತಹಶೀಲ್ದಾರರು ಮತ್ತು ಪೊಲೀಸರ ಕೈಗೆ ಕೊಟ್ಟರೆ, ಅವರ ಮೇಲೆ ಕೇಸ್ ಹಾಕಿದರೆ, ಆ ಡ್ರೈವರುಗಳೇ ತಪ್ಪೊಪ್ಪಿಗೆ ಬರೆದು ಕೊಟ್ಟರು. ಒಂದೇ ದಿವಸದಲಿ, ಅವರು ಮರು ದಿವಸ ಬರುವುದರಲ್ಲಿ ಅವರಿಗತ ಎಲ್ಲಾ ಕಾಗದಪತ್ರಗಳನ್ನು ಮಾಡಿಕೊಟ್ಟರು. ಎಫ್.ಸಿ.ಎ.ನವರೇ, ತಮ್ಮಲ್ಲಿಂದ ಸರ್ಟಿಫೈ ಆಗಿ ಹೋದಂಥ ಮಾಲು ಎಂದು ಮಾಡಿಕೊಟ್ಟರು. ನಮ್ಮ ಕಂದಾಯ ಇಲಾಖೆಯವರು ಸಹಿತ ಇಂತಹ ರೈತರ ಮಾಲು ಎಂದು ಹೇಳಿ, ಇದನ್ನು ಬಿಡಿ ಎಂದು ಹೇಳಿದರು. ಇದರ ಬಗ್ಗೆ ಕೇಸುಗಳು ದಾಖಲಾಗಿವೆ. ನಾನೂ ಮನವಿಯನ್ನು ಮಾಡಿದ್ದೇನೆ. ಕೇಂದ್ರಸರ್ಕಾರದ ಸಂಬಂಧಪಟ್ಟ ಮಂತ್ರಿಗಳಿಗೆ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಿ ಎಂದು ಪತ್ರವನ್ನು ಬರೆದಿದ್ದೇನೆ. ಆದರೆ, ಈವರೆಗೆ ಕ್ರಮ ಶೂನ್ಯ. ಇದು ಬಹಳ ದೊಡ್ಡ ಪ್ರಮಾಣದಲ್ಲಿ, ಒಂದು ಚೀಲಕ್ಕೆ ಇಷ್ಟು ಹಣ ಎಂದು 10 ರೂಪಾಯಿನಿಂದ ಹಿಡಿದು ಮೂವತ್ತೈದು ರೂಪಾಯಿವರೆಗೆ ದೊಡ್ಡ ಕುತಂತ್ರ, ಒಂದು ಷಡ್ಯಂತರ ನಡೆಯುತ್ತಾ ಇತ್ತು ಎಂದು ಹೇಳಿದರೆ ತಾಪ್ಪಾಗಲಿಕ್ಕಿಲ್ಲ. ಹೀಗಾಗಿ, ಅದನ್ನು ಕೆಲಮಟ್ಟಿಗೆ ತಡೆಯುವುದಕ್ಕೆ ಸಾಧ್ಯವಾದರೂ, ಸಂಪೂರ್ಣವಾಗಿ ಹೋಗಿಲ್ಲ ಇವತ್ತು ರಾಜ್ಯದ ಫುಡ್ ಕಾರ್ಪೊರೇಷನ್ ಪರಿಸ್ಥಿತಿ ತಮಗೆ ಗೊತ್ತು. ಕರ್ನಾಟಕ ರಾಜ್ಯದಲ್ಲಿ ಸುಮಾರು 70 ಪರ್ಸೆಂಟ್ ಸಂಬಳ ಸಾರಿಗೆಗೆ ಹೋಗುವಂತಾದ್ದು, 30 ಪರ್ಸೆಂಟ್ ಬಾಕಿ ವಿಚಾರಗಳಿಗೆ ವಿನಿಯೋಗವಾಗುತ್ತಿದೆ. ಈ ಆಹಾರ ಪದಾರ್ಥಗಳಿಗೆ, ರೈತ ಬೆಳೆದಂಥ ಮಾಲನ್ನು ಕೊಳ್ಳುವುದಕ್ಕೆ ದುಡ್ಡು ಇಡಬೇಕು. ಆದರೆ, ಇದು ಸಾಧ್ಯವೇ? ಭಾರತೀಯ ಆಹಾರ ನಿಗಮದವರು ಕೇಂದ್ರ ದುಡ್ಡು ಇಡಬೇಕು. ಆದರೆ, ಇದು ಸಾಧ್ಯವೇ? ಭಾರತೀಯ ಆಹಾರ ನಿಗಮದವರು ಕೇಂದ್ರ ಸರ್ಕಾರದಲ್ಲಿ ಮಾರ್ಕೆಟ್ ಇಂಟರ್‌ವೆನ್‌ಷನ್ ಪಾಲಿಸಿಯನ್ನೇ ಮಾಡಬೇಕು ಎಂದು ದೊಡ್ಡ ಜವಾಬ್ದಾರಿಯನ್ನು ವಹಿಸಿಕೊಟ್ಟಿದ್ದಾರೆ. ಈ ಭಾರತೀಯ ಆಹಾರ ನಿಗಮದವರು ದೇಶದಲ್ಲಿ ಎಲ್ಲಾ ಸೇರಿ ಸುಮಾರು 22 ಸಾವಿರ ಕೋಟಿಯಷ್ಟು ವ್ಯವಹಾರ ಮಾಡುತ್ತಾರೆ. ಇದೆಲ್ಲಾ ಸಂಪೂರ್ಣವಾಗಿ ಹೆಚ್ಚು ಪ್ರಮಾಣದಲ್ಲಿ 100ಕ್ಕೆ 90 ಪಾಲು ಹರ್ಯಾಣ ಮತ್ತು ಪಂಜಾಬ್‌ನಲ್ಲಿ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ಎಷ್ಟು ಮಾಡುತ್ತಾರೆ? ಇಲ್ಲಿಯವರೆಗೆ ಎರಡು ನೂರು ಕೋಟಿ ಎಂದು ಹೇಳಿದ್ದಾರೆ, ಇದನ್ನು ನಾವೆಲ್ಲಾ ಒಪ್ಪಿಕೊಂಡಿದ್ದೇವೆ. ಇದು ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. ಈ ಎರಡು ನೂರು ಕೋಟಿಯನ್ನು 22 ಸಾವಿರ ಕೋಟಿಗೆ ಹೋಲಿಕೆ ಮಾಡಿದಾಗ, ಇದು ಒಂದು ಪರ್ಸೆಂಟೂ ಅಲ್ಲ. ತಾವು ದಯವಿಟ್ಟು ಗಮನಿಸಬೇಕು. ಅವರು ಮಾಡಿದ್ದಾರೆಂದು ನಾವು ಬರೀ ಶಹಭಾಸ್‌ಗಿರಿ ಕೊಡುವುದಲ್ಲ; ಅವರು ಮಾಡಿದ್ದಾರೆ, ಇವತ್ತು ಒಂದು ತಿಂಗಳವರೆಗೆ ವಿಸ್ತರಣೆ ಮಾಡಿದ್ದಾರೆ, ಅದನ್ನು ನಾವು ಸ್ವಾಗತ ಮಾಡಬೇಕು. ಇದು ವಿಶೇಷವಾಗಿ ದಕ್ಷಿಣ ಭಾರತದ ರೈತರ ಹಕ್ಕು ಎಂದು ತೆಗೆದುಕೊಂಡರೆ,

ಮೇಲ್ಮಟ್ಟದಲ್ಲಿ ಕೇಂದ್ರಸರ್ಕಾರಕ್ಕೆ ಒತ್ತಾಯ ತಂದರೆ, ಹೆಚ್ಚಿನ ಪ್ರಮಾಣದಲ್ಲಿ ಇದನ್ನು ತೆಗೆದುಕೊಳ್ಳಬೇಕು. ಇದೊಂದೇ ಅಲ್ಲ. ಅನೇಕ ಬೆಳೆಗಳು ಬರುತ್ತವೆ. ಗೋಧಿ ಬರುತ್ತದೆ, ಕಡ್ಲೆ ತೆಗೆದುಕೊಳ್ಳಬೇಕು, ಸುದ್ದೆವದಿಂದ ಇವತ್ತು ಕಡ್ಲೆಗೆ ಬೆಲೆ ಇದೆ. ತೊಗರಿ ತೆಗೆದುಕೊಳ್ಳಬೇಕು. ಈ ಭಾಗದಲ್ಲಿ ಬರುವಂತಹ ರಾಗಿ ತೆಗೆದುಕೊಳ್ಳಬೇಕು. ಈ ಬಗ್ಗೆ ಸಹಿತ ರೈತರಿಂದ ಸಾಕಷ್ಟು ದೂರು ಇದೆ. ಕನಿಷ್ಟ ಬೆಲೆ ನಿಗದಿ ಮಾಡುವಾಗಲೂ ಸಹಿತ ರೈತರಿಗೆ ನ್ಯಾಯ ಒದಗಿಸುತ್ತಿಲ್ಲವೆಂಬ ಭಾವನೆ ಇದೆ. ಕೇಂದ್ರಸರ್ಕಾರ ನಿರ್ಧಾ್ರ ಮಾಡುವಂಥ ಕನಿಷ್ಟ ಬೆಂಬಲ ಬೆಲೆ ಏನಿದೆ, ಅದೂ ಸಹಿತ ಸರಿಯಾದುದಲ್ಲವೆಂಬ ವಾದ ಇದೆ. ಆದ್ದರಿಂದ, ನ್ಯಾಯಬದ್ಧವಾಗಿ ಸರ್ಕಾರ ತೆಗೆದು ಕೊಳ್ಳುವಂಥ ರೈತರ ಮಾಲುಗಳು, ಅದು ಭಾರತೀಯ ಆಹಾರ ನಿಗಮದವರಾಗಲೀ ಅಥವಾ ಬೇರೆ ಏಜೆನ್ಸಿಯವರಾಗಲಿ ಹಚ್ಚುವಂತಹ ಕೆಲಸವನ್ನು ಮಾಡಬೇಕಾದಾಗ ಸೂಕ್ತ ಗಮನ ಕೊಡಬೇಕು. ರಾಜ್ಯದಲ್ಲಿ ಆ ರೀತಿಯಲ್ಲಿ ಕೆಲಸವಾಗಿಲ್ಲವೆಂಬ ಭಾವನೆ ನಮಗಿದೆ. ಅವರೇನೋ ದೊಡ್ಡ ಉಪಕಾರ ಮಾಡಿದ್ದೇವೆ, ದೊಡ್ಡ ಕೆಲಸ ಮಾಡಿದ್ದೇವೆಂಬ ಧೋರಣೆಯಿಂದ ಇದ್ದಾರೆ. ದುರ್ದೈವದಿಂದ ನಮ್ಮ ಸರ್ಕಾರವೂ ಸಹಿತ ಅವರ ಬಗ್ಗೆ ಹೆಚ್ಚು ಗಮನ ಕೊಡುತ್ತಾ ಇಲ್ಲ. ಅವರು ಕಡ್ಡಾಯವಾಗಿ ಮಾಡಲೇಬೇಕು, ಪಂಜಾಬ್‌ನಲ್ಲಿ ಅಥವಾ ಹರ್ಯಾಣದಲ್ಲಿ ಈ ರೀತಿ ಏನಾದರೂ ಆಗಿಬಿಟ್ಟರೆ, ಆ ರಾಜ್ಯಗಳ ಇಡೀ ಮಂತ್ರಿಂಡಲವೇ ಹೋಗಿ ಪ್ರಧಾನಮಂತ್ರಿಗಳ ಮನೆ ಮುಂದೆ ಕುಳಿತು ಬಿಡುತ್ತದೆ. ಇಡೀ ಮಂತ್ರಿಮಂಡಲವೇ ಹೋಗಿ ಬರುವ ವರ್ಷಗಳಲ್ಲಿ ಆಗಲಿ ಮುಂದೆ ಎಂದು ನಾನು ಹಾರೈಸುತ್ತೇನೆ. ನಮ್ಮ ಭಾಗದಲ್ಲಿ ಇವತ್ತಿಗೂ ಒಂದು ಲಕ್ಷ ಚೀಲ ನರಗುಂದದಲ್ಲಿ ಇದೆ. ಸುಮಾರು ಒಂದೂವರೆ ಲಕ್ಷ ಚೀಲ ಹೋಗಿದೆ. ಇನ್ನೂ ಬರಬೇಕಾಗಿರುವುದು ಇದೊಂದೇ ತಾಲ್ಲೂಕಿನಲ್ಲಿ 2 ಲಕ್ಷ ಚೀಲ ಇದೆ. ಇದು ವ್ಯವಸ್ಥಿತವಾಗಿ ಹೊರಗಡೆ ಹೋಗಬೇಕು ಇಲ್ಲವೇ ಮಾರಾಟವಾಗಬೇಕು. ಇಲ್ಲವೇ ಅದನ್ನು ಖರೀದಿ ಮಾಡಿ ಸ್ಟೋರ್‌ನಲ್ಲಿ ಇಡತಕ್ಕ ಕೆಲಸವಾಗಬೇಕು. ಇವತ್ತು ಗೋಡೌನ್‌ಗಳು ಇಲ್ಲ, ಅದರ ಬಗ್ಗೆ ದೂರಗಾಮಿ ವ್ಯವಸ್ಥೆ ಮಾಡಬೇಕು. ಈ ಕೆಲಸವನ್ನು ಸರ್ಕಾರ ಮಾಡಬೇಕು. ಇದರ ಬಗ್ಗೆ ನಾನೂ ಒತ್ತಾಯ ಮಾಡುತ್ತೇನೆ. ಇನ್ನು ಅವರ್ತ ನಿಧಿಯನ್ನು ಹೆಚ್ಚು ಪ್ರಮಾಣದಲ್ಲಿ, ನೂರು ಕೋಟಿಗಿಂತಲೂ ಹೆಚ್ಚು ಪ್ರಮಾಣದಲ್ಲಿ ಇಟ್ಟು, ಈ ವ್ಯವಸ್ಥೆಗೆ ಯಾರು ಬರಲಿ ಅಥವಾ ಬರದೇ ಇರಲಿ, ಕೇಂದ್ರ ಸರ್ಕಾರದವರು ಮಾಡಲಿ ಅಥವಾ ಮಾಡದೇ ಇರಲಿ, ಭಾರತೀಯ ಆಹಾರ ನಿಗಮದವರು ಮಾಡಲಿ ಅಥವಾ ಮಾಡದೇ ಇರಲಿ, ರಾಜ್ಯಸರ್ಕಾರವೂ ಸಹಿತ ಇದನ್ನು ಮಾಡಬೇಕು. ಇದನ್ನು ಮಾಡುವುದಕ್ಕೆ ನಾವೆಲ್ಲಾ ವಸನಬದ್ಧರಿದ್ದೇವೆ, ನಾವು ರೈತರಿಗೆ, ಜನರಿಗೆಲ್ಲಾ ಆಶ್ವಾಸನೆ ಮಾಡುವುದಕ್ಕೆ ನಾವೆಲ್ಲಾ ವಚನಬದ್ಧರಿದ್ದೇವೆ, ನಾವು ರೈತರಿಗೆ, ಜನರಿಗೆಲ್ಲಾ ಆಶ್ವಾಸನೆ ಕೊಟ್ಟಿದ್ದೇವೆ. ನಾವು ರಾಜ್ಯದಲ್ಲಿ ರೈತರ ಪರಿಸ್ಥಿತಿಯನ್ನು ನೋಡಿದ್ದೇವೆ. ಸಾಲದ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಯಿತು. ರೈತರು ಏಕೆ ಸಾಯುತ್ತಾ ಇದ್ದಾರೆ? ಬಹುತೇಕ ಅವರು ತಮ್ಮ ವೃತ್ತಿಯಲ್ಲಿ ವಿಶ್ವಾಸ ಕಳೆದುಕೊಳ್ಳುವಂಥ ಪರಿಸ್ಥಿತಿಗೆ ಇವತ್ತು ಬಂದಿದ್ದಾರೆ. ಇವತ್ತು ಸಾಲ ಸಿಕ್ಕುತ್ತಾ ಇಲ್ಲ, ಸಾಲ ಕೊಡುವವರೆಲ್ಲಾ ಮುಗಿದುಬಿಟ್ಟಿದ್ದಾರೆ. ಅವರಿಗೆ ಏನು ಭೂಮಿ ಇದೆ, ಆಭೂಮಿಯ ನಾಲ್ಕು ಪಟ್ಟು ಸಾಲ ಬೆಳೆದು ಹೋಗಿದೆ. ಅವರ ಜೀವನ ನಿರ್ವಹಣೆಗೆ ಮತ್ತು ಅನೇಕ ಅಗತ್ಯಗಳಿಗೆ ಸಾಲ ಸಿಗದಂಥ ಪರಿಸ್ಥಿತಿಯಾಗಿದೆ. ಆದರಿಂದಾಗಿ ಮಾರುಕಟ್ಟೆಯಲ್ಲಿ ಯಾವುದೇ

ಚಟುವಟಿಕೆ ಇಲ್ಲ. ಹೀಗೆ ಅನೇಕ ವಿಧವಾದ ಆತಂಕಗಳನ್ನು ಇವತ್ತು ನಾವು ನೋಡುತ್ತಿದ್ದೇವೆ. ಅದಕ್ಕಾಗಿ ನನ್ನ ಕ್ಷೇತ್ರದಲ್ಲಿ ಮತ್ತು ಅನೇಕ ಕಡೆಗಳಲ್ಲಿ ಇರತಕ್ಕ ಮಾಲನ್ನು ಒಯ್ದು ಗೋಡೌನ್‌ಗಳು ಇಲ್ಲಿಯೇ ಇರಬಹುದು ಅಥವಾ ಹೊರ ರಾಜ್ಯಗಳಲ್ಲಿ ಇರಬಹುದು; ಅಲ್ಲಿಗೆ ಒಯ್ದು ಈ ರಾಜ್ಯದ ರೈತರಿಗೆ ಸಹಾಯಕ್ಕೆ ಬರಬೇಕು. ಕೆಲವು ಒಳ್ಳೆಯ ಅಧಿಕಾರಿಗಳೂ ಇದ್ದಾರೆಂದು ಹೇಳುವುದನ್ನು ನಾನು ಮರೆಯುವುದಿಲ್ಲ. ನಮ್ಮಲ್ಲಿಯೂ ಸಹ ಒಬ್ಬ ಸಣ್ಣ ಅಧಿಕಾರಿಯಾದರೂ, ಪ್ರಾಮಾಣಿಕವಾಗಿ ರೈತರಿಗೆ ಸಹಾಯವಾಗುವಂಥ, ನಿಷ್ಪಾವಂತ ಅಧಿಕಾರಿಗಳು ಇದ್ದಾರೆ. ಇವರನ್ನೆಲ್ಲಾ ಏನು ಮಾಡುತ್ತಾರೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅವನು ರೈತರ ಹಿತದೃಷ್ಟಿಯಿಂದ ಒಳ್ಳೆಯ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾನೆ. ರಾತ್ರಿ ಮತ್ತು ಹಗಲು ಸೇರಿ ಕೆಲಸ ಮಾಡುತ್ತಾನೆ. ಅವನನ್ನು ಆದಷ್ಟು ಬೇಗ ಅಲ್ಲಿಂದ ಓಡಿಸಿಬಿಡುವುದು; ತಮಿಳುನಾಡಿನಿಂದ ಬಂದರೆ, ಅವರನ್ನು ಕೆರಳಕ್ಕೆ ಕಳುಹಿಸಿಬಿಡುವುದು. ಕೇರಳದವರನ್ನು ಮತ್ತೆ ಇಲ್ಲಿ ತಂದುಹಾಕುವುದು. ಹೇಗೋ ನಡೆಯುವಂಥ ಕೆಲಸಗಳು ನಡೆಯಲಾರದಂಥ ಪರಿಸ್ಥಿತಿ. ಆದ್ದರಿಂದ, ನಮ್ಮ ರಾಜ್ಯದ ಆಹಾರ ನಿಗಮದವರೂ ಅಷ್ಟೇ ಚೆನ್ನಾಗಿದ್ದಾರೆಂದು ನಾನು ಹೇಳುವುದಿಲ್ಲ. ಆದರೂ ಸಹಿತ, ಅವರು ಚಟುವಟಿಕೆ ಮಾಡಿ, ಜಿಲ್ಲಾ ವ್ಯವಸ್ಥೆ ಸೇರಿ, ಎಲ್ಲಾ ರೀತಿಯ ಪ್ರೋತ್ಸಾಹ ಮಾಡಿ, ಎಲ್ಲಾ ರೀತಿಯ ಸಹಕಾರ ಮಾಡಿದರೂ, ಆ ರೀತಿಯಾದಂಥ ವ್ಯವಸ್ಥೆ ಇರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದೊಂದು ಬಹಳ ಗಂಭೀರವಾದ ಸಮಸ್ಯೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುತ್ತಾ, ರೈತರು ಇದ್ದ ಭೂಮಿಯನ್ನೆಲ್ಲಾ ಆಡ ಇಟ್ಟಿದ್ದಾರೆ, ಸಾಲ ಜಾಸ್ತಿಯಾಗಿದೆ, ಸಾಲ ತೀರಿಸುವುದಕ್ಕಾಗುತ್ತಾ ಇಲ್ಲ ಎನ್ನತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ತಮ್ಮ ಸಲಹೆ ಏನು? ಇರತಕ್ಕಂಥ ಸಾಲದ ಭಾರವನ್ನು ಇಳಿಸಬೇಕೆಂದು ಹೇಳುತ್ತೀರೋ, ಇನ್ನು ಮುಂದೆ ರೈತ ಬಂಡವಾಳನ್ನು ಹೂಡಬೇಕು, ಆದರೆ ಬಂಡವಾಳವನ್ನು ಹೊಡುವುದಕ್ಕೆ ಸಾಧ್ಯವಿಲ್ಲ. ಎಲ್ಲಿಯೂ ಸಾಲ ಸಿಗುವುದಿಲ್ಲ. ಬ್ಯಾಂಕ್‌ನಲ್ಲಿ, ಸಹಕಾರ ಸಂಘದಲ್ಲಿ ಸಾಲ ಕೊಡುವುದಿಲ್ಲ, ಅಲ್ಲಿ ರೈತ ಡಿಫಾಲ್ಟರ್ ಆಗಿದ್ದಾನೆ. ಖಾಸಗಿಯವರು ಹತ್ತಿರ ಹೋಗಬೇಕು. ಖಾಸಗೀಯವರು ದುಬಾರಿ ಬಡ್ಡಿ ಹಾಕುತ್ತಾರೆ, ಇದು ಎಷ್ಟಾಗುತ್ತದೆ, ಏನು ಎಂಬುದರ ಬಗ್ಗೆ ತಮಗೆ ಗೊತ್ತಿದೆ. ಮತ್ತೆ ಆಸ್ತಿಯನ್ನು ಕೂಡ ಬೇರೆಯವರಿಗೆ ಈಡು ಮಾಡುವುದಕ್ಕೆ ಸಾಧ್ಯವಿಲ್ಲ ಇಂತಹ ಧಾರುಣವಾದ ಪರಿಸ್ಥಿತಿ ಇರುವಾಗ ತಾವು ಇದಕ್ಕೆ ಏನು ಮಾಡಬೇಕೆಂದು ಹೇಳುತ್ತೀರಿ ತಮ್ಮ ಸಲಹೆಗಳು ಏನು?

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರ ಸಮಸ್ಯೆಯೇ ನಿಜ. ಇದರ ವ್ಯಾಪಕತೆ ಈಗ ನಾನು ಹೇಳಿದಂತೆ ಬರೀ ಬೆಲೆಗಳಿಗೆ ಸೀಮಿತವಲ್ಲವೆಂದು ತಿಳಿದುಕೊಳ್ಳುತ್ತೇನೆ. ಅನೇಕ ವಿಚಾರಗಳ ಬಗ್ಗೆ, ಅದು ರಾಜ್ಯಪಾಲರ ಭಾಷಣ ಆಗಿರಬಹುದು, ಡಬ್ಲ್ಯು.ಟಿ.ಓ. ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡಬೇಕಾಗಿರುತ್ತೆ. ಇದು ಏಕೆ ಆಗಿರಬಹುದು ಎನ್ನುವುದರ ಬಗ್ಗೆಯೂ ಚಿಂತನೆಯಾಗಬೇಕು. ಈ ಒಂದು ವರ್ಷದಲ್ಲಿ ಗೋವಿನ ಜೋಳದ ಸಮಸ್ಯೆ ಬಂದಿರುವುದು, ಇದು ಕೇವಲ ಕಾರಣ ಮಾತ್ರ. ಹತ್ತಾರು ವರ್ಷಗಳಿಂದ ಇದು ಬೆಳೆದುಕೊಂಡು ಬಂದಿದೆ. ನಾನು ಈಗಾಗಲೇ

ಸಹಕಾರಿ ಸಚಿವರು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿದೆ; ಸಾಲಗಳು ರಿಬೌಂಡ್; ಇದು ಸುಮಾರು ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದು, ಹತ್ತು ಸಾವಿರ ರೂಪಾಯಿಗಳ ಸಾಲ ಇದ್ದುದು, ಇವತ್ತು ಒಂದು ಲಕ್ಷ ರೂಪಾಯಿಗಳಾಗಿದೆ. ಇವತ್ತು ನಾವು ಹೊಸ ಯುಗದಲ್ಲಿ ಇದ್ದೇವೆ. ಉತ್ಪಾದನೆ ಜಾಸ್ತಿಯಾಗಬೇಕು, ಭೂಮಿ ಏನೂ ಜಾಸ್ತಿಯಾಗುವುದಿಲ್ಲ. ಭೂಮಿ ಮಾತ್ರ ಅಷ್ಟೇ ಇರುತ್ತದೆ. ನಾವು ಜಾಗತೀಕ ಮಾರುಗಟ್ಟೆಗಳಲ್ಲಿ ಸ್ಪರ್ಧೆ ಮಾಡಬೇಕು. ಇದಕ್ಕೆಲ್ಲಾ ಬಂಡವಾಳ ಬೇಕೆ ಬೇಕು. ಅದಕ್ಕೆ ಹೊಸ ಆರ್ಥಿಕನೀತಿ ಬರಬೇಕು. ಕೇಂದ್ರ ಸರ್ಕಾರದ ಆರ್ಥಿಕ ನೀತಿ ಬದಲಾವಣೆಯಾಗಬೇಕು. ರಾಜ್ಯದಲ್ಲಿ ಇಂಪ್ಲಿಮೆಂಟ್ ಮಾಡುವಂಥ ನಮ್ಮದೆಲ್ಲ ಆದ ನೀತಿ ಇರಬೇಕು. ಇದ್ದಂಥ ಬಂಡವಾಳವನ್ನು ಏನು ಮಾಡಬೇಕೆಂಬ ದೂರಗಾಮಿ ಯೋಜನೆ ಇರಬೇಕು. ಅದನ್ನು ಏನಾದರೂ ಸೂಟ್ ಬಿಡಬೇಕೇ ಅಥವಾ ಅದಕ್ಕೆ ಏನಾದರೂ ಕಂತುಮಾಡಬೇಕೇ, ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡುವಂಥ ಒಂದು ಹೊಸ ವ್ಯವಸ್ಥೆ ಇಲ್ಲಿ ಬರಬೇಕು. ಸದ್ಯಕ್ಕೆ ತಾವು ಅದನ್ನು ಸಮರ್ಥನೆ ಮಾಡುತ್ತೀರಿ. ತಮ್ಮ ಮಾತಿನಲ್ಲಿ ಇನ್ನೂ ವಿಷದವಾಗಿ ಹೇಳುತ್ತೀರಿ. ಏಕೆಂದರೆ, ತಾವು ಇದರ ರೂವಾರಿಗಳು. ಹಿಂದಿನ ಸರ್ಕಾರದಲ್ಲಿ ತಾವು ಇದಕ್ಕೆ ಹೆಚ್ಚಿನ ಬೆಳಕನ್ನು ಚೆಲ್ಲಿದ್ದೀರಿ. ಸಂಪೂರ್ಣವಾಗಿ ರೈತರನ್ನು ಈ ಋಣಭಾರದಿಂದ ಮುಕ್ತ ಮಾಡಿ, ಹೊಸ ಶಕ್ತಿಯನ್ನು ತುಂಬಬೇಕು. ಹೊಸ ಮಾರ್ಗದರ್ಶನ ಮಾಡಬೇಕು. ತಾಂತ್ರಿಕವಾಗಿ ಮತ್ತು ಹಣಕಾಸಿನ ದೃಷ್ಟಿಯಿಂದ ಹೊಸಮಾರ್ಗವನ್ನು ತೋರಿಸಬೇಕು. ಆಗ ಅವರಿಗೆ ಕಾಂಪೀಟ್ ಮಾಡುವುದಕ್ಕೆ ಹಚ್ಚಬೇಕು. ಅವರು ಅದರಲ್ಲಿ ಹೆಚ್ಚು ಹೆಚ್ಚು ಉತ್ಪಾದನೆ ಮಾಡಲಿಕ್ಕೆ ಹಚ್ಚಬೇಕು. ಅದಕ್ಕೆ ಬೆಲೆಯನ್ನು ಕಟ್ಟಿಕೊಡಬೇಕೆನ್ನುವ ಮಾತನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಅತ್ಯಂತ ಮಹತ್ವಪೂರ್ಣವಾದಂತಹ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಬಹಳಷ್ಟು ಜನ ಮಾನ್ಯ ಸದಸ್ಯರುಗಳು ಕೇಳಿಕೊಂಡಿದ್ದಾರೆ. ಆದ್ದರಿಂದ ಈಗ ಈ ಚರ್ಚೆಯನ್ನು ಇವತ್ತಿಗೆ ಮುಗಿಸಿ ದಿನಾಂಕ 7-03-2001ರ ಬುಧವಾರಕ್ಕೆ ಮುಂದೂಡುತ್ತೇನೆ.

ಸಭೆಯು 2-22 ನಿಮಿಷಕ್ಕೆ ಮುಕ್ತಾಯವಾಯಿತು.

(ಸದನವು 2 ಗಂಟೆ 22 ನಿಮಿಷಕ್ಕೆ ಮುಗಿದು ಮತ್ತೆ ಸಭೆಯ ದಿನಾಂಕ 07-03-2001ರ ಬುಧವಾರ ಬೆಳಿಗ್ಗೆ 11-00 ಗಂಟೆಗೆ ಸೇರಲು ನಿರ್ಧರಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು, ಸಶಾಮು. ತುಮಕೂರು.ಕಾಸೂ. 146 - 350 ಪುಸ್ತಕಗಳು, ದಿನಾಂಕ:05-10-2002.